ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 36 ಸೆಪ್ಟೆಂಬರ್ 12, 1982 ಬೆಲೆ 60 ಪೈಸೆ

ಷೇಖ್ ನಿಧನಕ್ಕೆ ಶೋಕ

ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿಯವರಾದ ಕಾಂ| ಇ. ಎಂ. ಎಸ್. ನಂಬೂದ್ರಿಪಾಡ್ ಅವರು ಸಾಮ್ರಾಜ್ಯಶಾಹಿ ವಿರೋಧಿ ಆಂದೋಳನದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಕಾಶ್ಮೀರದ ಮುಖ್ಯ ಮಂತ್ರಿ ಷೇಖ್ ಅಬ್ದುಲ್ಲಾ ಅವರ ನಿಧನಕ್ಕೆ ಸಂತಾಪ ವ್ಯಕ್ತಮಾಡಿ, ಇವರ ಅಗಲುವಿಕೆಯಿಂದ, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗೆ ಭಾರಿ ಪೆಟ್ಟಾಗಿದೆಯೆಂದು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಷೇಖ್ ಅಬ್ದುಲ್ಲಾರವರ ನಿಧನಕ್ಕೆ ಕರ್ನಾಟಕ ರಾಜ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಅಪಾರ ದುಃಖವನ್ನು ವ್ಯಕ್ತಪಡಿಸಿದೆ.

ಸಂಪಾದಕೀಯ

ಬರಗಾಲ ನಿವಾರಣೆಗೆ ತೀವ್ರ ಹೋರಾಟ ನಡೆಯಲಿ

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ, ಉತ್ತರ ಕನ್ನಡ ಶಿವಮೊಗ್ಗ, ಧಾರವಾಡ, ಬೆಳಗಾವಿ ಜಿಲ್ಲೆಗಳ ಜನರೆಲ್ಲ ಅಪಾರ ಮಳೆಯಿಂದಾಗಿ ಕಷ್ಟ ನಷ್ಟ ಅನುಭವಿಸುತ್ತಿರುವಾಗಲೇ, ಸದಾಕಾಲ ಮಳೆಯ ಅಭಾವಕ್ಕೆ ತುತ್ತಾಗುತ್ತಲೇ ಇರುವ, ಕೋಲಾರ, ಬಿಜಾಪುರ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ ಹಾಗೆಯೇ ಬೆಂಗಳೂರು, ಮೈಸೂರು, ತುಮಕೂರು ಜಿಲ್ಲೆಗಳೆಲ್ಲ ಬರಗಾಲದ ಬವಣೆಯನ್ನೆದುರಿಸುವಂತಾಗಿದೆ. ಕೋಲಾರ ಜಿಲ್ಲೆಯ2,78403 ಹೆಕ್ಟಾರಿನಲ್ಲಿ 69,016 ಹೆಕ್ಟಾರ್ ಮಾತ್ರ ಬಿತ್ತನೆಯಾಗಿದ್ದರೂ ಕೂಡ ಬಿತ್ತನೆಯಾದ ಕೆಲವೇ ದಿವಸದಲ್ಲಿ ಮಳೆ ನಿಂತುಹೋದುದರಿಂದ ಹೆಚ್ಚು ಬೆಲೆಕೊಟ್ಟು ತಂದು ಬೀಜ ಹಾಕಿದ್ದೆಲ್ಲ ನಿರುಪಯುಕ್ತವಾಗಿವೆ. ಕೇಂದ್ರ ಸರಕಾರ ಅಂತರರಾಷ್ಟ್ರೀಯ ಹಣ ಕಾಸು ಸಂಸ್ಥೆಯಿಂದ ಹಣ ಪಡೆಯುವಾಗ ಒಪ್ಪಿಕೊಂಡ ಕರಾರಿನಂತೆ ರಸಾಯನಿಕ ಗೊಬ್ಬರದ ಬೆಲೆ ಹೆಚ್ಚಾಗಿದ್ದರೂ ಕೂಡ ಹೆಚ್ಚು ಬೆಳೆ ಬರುತ್ತದೆಂಬ ಆಸೆಯಿಂದ ರೈತರೆಲ್ಲ ಗೊಬ್ಬರ ಹಾಕಿದ್ದೆಲ್ಲ ನಿರುಪಯುಕ್ತವಾಗಿವೆ. ಕೋಲಾರ ಜಿಲ್ಲೆಯ ಗತಿಯನ್ನೇ ಇತರ ಜಿಲ್ಲೆಯ ರೈತರೆಲ್ಲ ಎದುರಿಸುತ್ತಿದ್ದಾರೆ. ದನಗಳಿಗೆ ಮೇವಿಲ್ಲ ಬಾವಿ, ನಾಲೆ, ಹಳ್ಳ, ನದಿಗಳೆಲ್ಲ ಪೂರ್ಣ ಒಣಗಿರುವುದರಿಂದ ಕುಡಿಯಲು ನೀರಿಲ್ಲ. ದವಸ ಧಾನ್ಯಗಳ ಬೆಲೆ ಹೆಚ್ಚಾಗುತ್ತಿದೆ. ದುಡಿಯಲು ಕೆಲಸವಿಲ್ಲ. ಬಿಜಾಪುರ, ಗುಲ್ಬರ್ಗದ ಜನರೆಲ್ಲ ಗುಳೇಕಿತ್ತುಕೊಂಡು ಮಹಾರಾಷ್ಟ್ರ ಸೇರುತ್ತಿದ್ದರೆ, ಇತರ ಜಿಲ್ಲೆಗಳ ಜನರೆಲ್ಲ ನೆರೆ ಹೊರೆಯ ರಾಜ್ಯಗಳಲ್ಲಿ ಆಶ್ರಯಪಡೆಯುವ ಗತಿ ಉಂಟಾಗಿದೆ.

ಕರ್ನಾಟಕ ರಾಜ್ಯದ ಅರ್ಧಕ್ಕೂ ಮೇಲ್ಪಟ್ಟ ಜಿಲ್ಲೆಗಳೆಲ್ಲ ಯಾವಾಗಲೂ ಮಳೆಯ ಅಭಾವದಿಂದಾಗಿ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಈ ಜಿಲ್ಲೆಗಳಲ್ಲಿ ಶಾಶ್ವತ ಬರಗಾಲ ಕಾಮಗಿರಿಗಳನ್ನು ಕೈಗೊಳ್ಳುವ ದೀರ್ಘ ಯೋಜನೆ ಕೈಗೊಳ್ಳಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ ಸಂಘಗಳೆಲ್ಲ ಹಲವಾರು ವರ್ಷಗಳಿಂದಲೂ ಕೇಳುತ್ತ ಬಂದಿದೆ, ಹೋರಾಟಗಳನ್ನೂ ನಡೆಸಿದೆ. ಬರಗಾಲ ಬಿದ್ದಾಗ, ಚಳುವಳಿ ನಡೆದಾಗ ಕಚ್ಚಾ ರಸ್ತೆ, ಕೆರೆ ರಿಪೇರಿಗಳಂತ ತಾತ್ಪೂರ್ತಿಕ ಕೆಲಸಗಳನ್ನಷ್ಟೇ ಕೈಗೊಂಡು, ಸರಕಾರ ಶಾಶ್ವತ ಪರಿಹಾರ ಕಾರ್ಯವನ್ನು ಕಡೆಗಣಿಸುತ್ತಿದೆ. ಜಿಲ್ಲೆಗಳಿಂದ ಬಂದ ವರದಿಗಳಂತೆ ಸರಕಾರ ಕೂಡ ಮಾಡುವ ಸಹಾಯವೆಲ್ಲ ಸಿರಿವಂತ, ದೊಡ್ಡ ರೈತರಿಗಷ್ಟೇ ದಕ್ಕುತ್ತದಲ್ಲದೆ, ನಿಜವಾಗಿಯೂ ಸಹಾಯಬೇಕಾದವರಿಗೆ ಅದು ಸಿಗುತ್ತಿಲ್ಲ.

ಈ ಜಿಲ್ಲೆಗಳಲ್ಲೂ ಕೃಷ್ಣಾ ಮೇಲ್ದಂಡೆ ಯೋಜನೆಗಳಂತ ಹಲವಾರು ನೀರಾವರಿ ಯೋಜನೆಗಳನ್ನೂ, ಕೆರೆ-ಭಾವಿಗಳ ಕೆಲಸಗಳನ್ನೂ ಕೈಗೊಂಡದ್ದಾದರೆ ಸ್ವಲ್ಪ ಮಟ್ಟಿಗಾದರೂ ರೈತರಿಗೆ ಸಹಾಯವಾಗಲು ಸಾಧ್ಯ. ಆದರೆ ಬಂಡವಾಳಶಾಹಿ—ಭೂಮಾಲಿಕ ಸರಕಾರ ಇಂಥ ಅಭಿವೃದ್ಧಿ ಕೆಲಸಗಳಿಗೆ ಗಮನ ಹರಿಸುತ್ತಿಲ್ಲ. ಪ್ರಕೃತಿಯ ದೇಣಿಗೆಯ ಉಪಯೋಗ ರೈತರಿಗೆ ಸಿಗುವಂತೆ ಮಾಡುವ ಯಾವ ಯೋಜನೆಯನ್ನೂ ಕಾಂಗ್ರೆ ಸರಕಾರ ಕೈಗೊಳ್ಳುತ್ತಿಲ್ಲ.

ಶಾಶ್ವತ ಬರಗಾಲ ನಿವಾರಣೆಯ ಕಾರ್ಯಕೈಗೊಳ್ಳಬೇಕೆಂದೂ, ಬರಗಾಲ ಪೀಡಿತ ಪ್ರದೇಶದ ಜನರಿಗೆಲ್ಲ ಸರಿಯಾದ ಪರಿಹಾರವನ್ನು ಜನತಾ ಕಮಿಟಿಗಳ ಮೂಲಕ ಒದಗಿಸಬೇಕೆಂದೂ, ಪರಿಹಾರ ಕಾಮಗಾರಿಗಳನ್ನು ಕೈಗೊಂಡು ಜನರು ಊರುಬಿಟ್ಟು ಹೋಗುವುದನ್ನು ತಡೆಗಟ್ಟಬೇಕೆಂದೂ ಸರಕಾರದ ಮೇಲೆ ಒತ್ತಾಯ ತರುವ ಸಲುವಾಗಿ ಸಿ. ಪಿ. ಐ. (ಎಂ), ರೈತ ಸಂಘ, ಇತರ ಪ್ರಜಾಪ್ರಭುತ್ವ ಪಾರ್ಟಿಗಳು ಮತ್ತು ಜನತೆ ತೀವ್ರವಾದ ಹೋರಾಟ ನಡೆಸುವುದು ಅತ್ಯಗತ್ಯ.

●

ರಾಜ್ಯ ಸಿ.ಐ.ಟಿ.ಯು. ಕೌನ್ಸಿಲ್ ಸಭೆಯ ಕರೆ

ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿರಿ

ಕಾಂಗ್ರೆ ಸರಕಾರದ ಆರ್ಥಿಕ ನೀತಿಯ ವಿರುದ್ಧ ಕಾರ್ಮಿಕರೆಲ್ಲ ಒಗ್ಗಟ್ಟಿನಿಂದ ಹೋರಾಟ ಮಾಡುತ್ತಿರುವಾಗ, ಕಾರ್ಮಿಕರ ಐಕ್ಯತೆಯನ್ನು ಮುರಿಯಲು, ಕಾರ್ಮಿಕ ಸಂಘಟನೆಯ, ಕಾರ್ಮಿಕ ಹೋರಾಟದ ಹಕ್ಕುಗಳನ್ನು ಕಸಿದುಕೊಳ್ಳುವ ತಿದ್ದುಪಡಿಗಳನ್ನು ಲೋಕಸಭೆಯಲ್ಲಿ ಮಂಡಿಸಿ ತನ್ನ ಪಕ್ಷದ ಕಾರ್ಮಿಕ ಸಂಘಟನೆಗೂ, ಮಾಲೀಕ ವರ್ಗಕ್ಕೂ ಸಹಾಯ ಮತ್ತು ಲಾಭ ಮಾಡಿಕೊಡುವ ನೀತಿಯನ್ನು ಖಂಡಿಸಲು ಅದರ ವಿರುದ್ಧ ಐಕ್ಯ ಹೋರಾಟ ಮಾಡಬೇಕೆಂದು ತಾ|| 4-5 ರಂದು ಮೈಸೂರಿನಲ್ಲಿ ನಡೆದ ಸಿ ಐ ಟಿ ಯು ವಿನ ರಾಜ್ಯ ಕೌನ್ಸಿಲ್ ಸಭೆ ಕಾರ್ಮಿಕ ವರ್ಗಕ್ಕೆ ಕರೆಕೊಟ್ಟಿದೆ.

ಪ್ರಾರಂಭದಲ್ಲಿ ರಾಜ್ಯ ಸೆಕ್ರೆಟರಿಯಾದ ಕಾಂ| ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ನಮ್ಮ ರಾಜ್ಯದ ರಾಜಕೀಯ, ಆರ್ಥಿಕ ಪರಿಸ್ಥಿತಿಯನ್ನೂ ಕಾರ್ಮಿಕರ ಹೋರಾಟವನ್ನು ವಿವರಿಸಿದರು. ಕಾಂ| ಸೂರ್ಯನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು.

ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಬಿಹಾರ ಪತ್ರಿಕಾ ಮಸೂದೆಯನ್ನು, ಅದನ್ನು ಪ್ರತಿಭಟಿಸಿದಾಗ ಪತ್ರಕರ್ತರ ಮೇಲೆ ಪೋಲಿಸರು ನಡೆಸಿದ ದಬ್ಬಾಳಿಕೆಯನ್ನು ಖಂಡಿಸುವ, ರಾಷ್ಟ್ರಾಧ್ಯಕ್ಷರು ಆ ಮಸೂದೆಗೆ ಸಹಿ ಹಾಕಬಾರದೆಂದು ಕೇಳಿಕೊಳ್ಳುವ-ಮುಂಬಯಿಯ ಜವಳಿ ಗಿರಣಿ ಕಾರ್ಮಿಕರ ಹೋರಾಟಕ್ಕೂ, ಪೋಲೀಸರ ಚಳುವಳಿಗೂ ಬೆಂಬಲ ನೀಡುವ ನಿರ್ಣಯಗಳು ಪಾಸಾದವು. ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಅತೀವ ಮಳೆಯಿಂದಾಗಿ ಅಪಾರ ಹಾನಿ ಉಂಟಾಗಿದ್ದು, ದ. ಕ. ಜಿಲ್ಲೆಯ ಸಿ. ಐ. ಟಿ. ಯು. ಯೂನಿಯನ್‌ಗಳು ಸಾಧಾರಣ 25 ಸಾವಿರ ರೂಪಾಯಿ ಧನ ಸಹಾಯ ಮಾಡಿದ್ದಲ್ಲದೆ, ಕಾರ್ಮಿಕರಿಗೆ ಮನೆ ಕಟ್ಟಿಸಿಕೊಳ್ಳಲು ಸಹಾಯ ಮಾಡುತ್ತಿರುವುದನ್ನು ಪ್ರಶಂಸೆಮಾಡಿ, ನೆರೆ ಪರಿಹಾರವನ್ನು ರಾಜಕೀಯವಾಗಿ ಉಪಯೋಗಿಸುತ್ತಿರುವ ಕಾಂಗ್ರೆ ಸರಕಾರವನ್ನು ಬಲವಾಗಿ ಖಂಡಿಸಿ, ಸಂತ್ರಸ್ಥರಿಗೆಲ್ಲ ಯೋಗ್ಯ ಪರಿಹಾರ ನೀಡಬೇಕೆಂದೂ, ಹಾಗೆಯೇ ರಾಜ್ಯದ 8 ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದಾಗಿ ಬೆಳೆಗಳೆಲ್ಲ ಒಣಗಿದ್ದಲ್ಲದೆ, ದನಕರುಗಳಿಗೂ, ಜನರಿಗೂ ಕುಡಿಯಲು ಕೂಡ ನೀರಿಲ್ಲದೆ, ಪಶುಗಳಿಗೆ ಮೇವಿಲ್ಲದೆ, ಗಂಭೀರ ಪರಿಸ್ಥಿತಿ ಉಂಟಾಗಿದೆ. ಕಾಯಂ ಪರಿಹಾರ ಕಾರ್ಯವನ್ನು ಸರಕಾರ ಕೂಡಲೇ ಕೈಗೊಳ್ಳಬೇಕೆಂದೂ ಒತ್ತಾಯ ಮಾಡುವ ನಿರ್ಣಯಗಳಾದವು.

ದವಾಖಾನೆ ನೌಕರದಾರರು, ಶಾಲೆ ಮಾಸ್ತರು ಮೊದಲಾದವರನ್ನೆಲ್ಲ ಕಾರ್ಮಿಕ ಕಾಯಿದೆಯಿಂದ ಹೊರಗಿಟ್ಟು, ಅವರೆಲ್ಲ ತಮ್ಮ ನ್ಯಾಯವಾದ ಬೇಡಿಕೆಗಳ ಸಲುವಾಗಿ ಮುಷ್ಕರ ಹೂಡಬಾರದೆಂಬ ತಿದ್ದುಪಡಿ ಮಾಡಿರುವುದನ್ನು ಖಂಡಿಸಿ, ಇಂಟಕ್

(8ನೇ ಪುಟ ನೋಡಿ)

ಅಕ್ಟೋಬರ್ ೪ : ಶಾಂತಿ ಯಾತ್ರೆಯನ್ನು ಯಶಸ್ವಿಗೊಳಿಸಿ

ನೆರೆ ಹೊರೆ

ಕೇಂದ್ರಾಡಳಿತ ದಿಲ್ಲಿಯಲ್ಲಿ ಹದಿನೆಂಟು ನಿಮಿಷಕ್ಕೊಂದು ಕೊಲೆ ಅಥವಾ ದರೋಡೆ !

ಹೌದು, ಜುಲೈ 14 ರಂದು ಆಗಿನ ಗೃಹಮಂತ್ರಿ ವೆಂಕಟರಾಮನ್ ಹಾಗೂ ಅವರ ಕಿರಿಯ ಸಹಚರ ಪಿ. ವೆಂಕಟಸುಬ್ಬಯ್ಯ ಸಂಸತ್ತಿಗೆ ನೀಡಿದ ಕೆಲವು ವಿವರಗಳ ಪ್ರಕಾರ 1981 ರಲ್ಲಿ ದಿಲ್ಲಿಯಲ್ಲಿ 30646 ಪ್ರಮುಖ ಅಪರಾಧಗಳು ದಾಖಲೆಯಾದವು. ಅಂದರೆ ದಿನಕ್ಕೆ 80 ಅಥವಾ ಹದಿನೆಂಟು ನಿಮಿಷಕ್ಕೊಂದು ಕೊಲೆ, ಸುಲಿಗೆ ಇತ್ಯಾದಿಯ ಸುದ್ದಿ ದಿಲ್ಲಿಯ ನಾಗರಿಕರ ಕಿವಿಗೆ ಬೀಳುತ್ತಿರುತ್ತದೆ ಇದರಲ್ಲಿ ಹೆಣ್ಣು ಮಕ್ಕಳನ್ನು ಅಪಹರಿಸುವುದು ಇತ್ಯಾದಿ 'ಸಣ್ಣ' ಅಪರಾಧಗಳು ಲೆಕ್ಕಕ್ಕೆ ಬರುವುದಿಲ್ಲ ಹೀಗಿದ್ದರೂ ದಿಲ್ಲಿಯಲ್ಲಿ ಅಪರಾಧಗಳ ಸಂಖ್ಯೆ ಕಡಿಮೆಯಾಗುತ್ತಿದೆಯೆಂದು ಈ ಮಂತ್ರಿದ್ವಯಗಳ ಹಠ.!

ಕೆಲವೇ ದಿನಗಳ ಹಿಂದೆ ಗೃಹಮಂತ್ರಿಗಳು ನೀಡಿದ ಹೇಳಿಕೆಯೊಂದರ ಪ್ರಕಾರವೇ ವರ್ಷದ ಮೊದಲ ಆರು ತಿಂಗಳಲ್ಲಿ ನಡೆದ ಕೊಲೆಗಳ ಸಂಖ್ಯೆ 125. ಕಳೆದ ವರ್ಷ ಇದೇ ಅವಧಿಯಲ್ಲಿ ಆ ಸಂಖ್ಯೆ 103. 1981–82 ರಲ್ಲಿ ಒಟ್ಟು ಕೊಲೆಗಳು 207 ಆಗಿದ್ದರೆ. ಅದರ ಹಿಂದಿನ ವರ್ಷ 192 ಇತ್ತು. ಹಾಗಾದರೆ ಏಕೆ ಗೃಹಮಂತ್ರಿಗಳು ಅಪರಾಧಗಳ ಸಂಖ್ಯೆ ಇಳಿಯುತ್ತಿದೆ ಎನ್ನುತ್ತಿದ್ದಾರೆ. ಅವರ ಹೇಳಿಕೆಯ ಹಿಂದಿರುವ ಗುಟ್ಟು ಇಷ್ಟೇ. ದಿಲ್ಲಿಯಲ್ಲಿ ನಡೆದ ಅಪರಾಧಗಳ ಸಂಪೂರ್ಣ ವಿವರ ದಾಖಲು ಮಾಡಿಕೊಂಡು ಪತ್ರಿಕೆಗಳಿಗೆ ನೀಡಬಾರದು ಎಂದು ಒಂದು ಹಂತದಲ್ಲಿ ದಿಲ್ಲಿಯ ಪೋಲಿಸ್ ಅಧಿಕಾರಿಗಳು ತಮ್ಮ ಕೈಕೆಳಗಿನವರಿಗೆ ಆಜ್ಞೆಯಿತ್ತಿದ್ದರು. ಗೃಹಮಂತ್ರಿಗಳ ಲೆಕ್ಕಾಚಾರದ ಮೂಲ ಇದೇ.

ದಿಲ್ಲಿಯಲ್ಲಿ ಕುಸಿದು ಬೀಳುತ್ತಿರುವ ಕಾನೂನು ವ್ಯವಸ್ಥೆ ಬಗ್ಗೆ ಗೃಹಮಂತ್ರಿಗಳಿಗೆ ನಾಚಿಕೆಯೆನಿಸುವುದಿಲ್ಲ ಮಾತ್ರವಲ್ಲ ಅವರು ಅದನ್ನು ಜಗತ್ತಿನ ಇತರೆ ಮಹಾನಗರಗಳಿಗೆ ಹೋಲಿಸಿ ತಮ್ಮ ಬೆನ್ನು ತಟ್ಟಿಕೊಂಡಿದ್ದಾರೆ ! ಇಂದಿರಾಗಾಂಧಿ ಅಧಿಕಾರಕ್ಕೆ ಮರಳಿದಂದಿನಿಂದ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಆಡಳಿತವಿಲ್ಲದ ಈ ನಗರದಲ್ಲಿ ಕೇಂದ್ರದ ಕಾಂಗ್ರೆಸ್ (ಐ) ನಡೆಸಿದ ದುರಾಡಳಿತವದ್ನು ಮುಚ್ಚಿಹಾಕುವುದು ಇಂತಹ ವಿಚಿತ್ರ ತರ್ಕದಿಂದ ಮಾತ್ರ ಸಾಧ್ಯ.

'ರಾಣಿ ಸಾಹೇಬರ ಕಾಲು ನೆಕ್ಕೇವು'

ಶ್ರೀಮತಿ ಇಂದಿರಾಗಾಂಧಿಯವರು ಉಂಟುಮಾಡಿರುವ "ಭೋಪರಾಕು" ವಾತಾವರಣದಲ್ಲಿ ಮಂತ್ರಿಗಳು, ಮುಖ್ಯಮಂತ್ರಿಗಳು, ಅಧಿಕಾರಿಗಳು 'ನಾಯಕಿ'ಗೆ ತಮ್ಮ ನಿಷ್ಠೆ ಸಾಬೀತುಗೊಳಿಸಲು ತಾಮುಂದು ನಾಮುಂದು ಎಂದು ಕಿತ್ತಾಡುವ ನಾಚಿಕೆಗೇಡಿನ ಸ್ಥಿತಿಯಿರುವುದನ್ನು ನಾವು ತುರ್ತು ಪರಿಸ್ಥಿತಿಯಲ್ಲಿ ಕಂಡಿದ್ದೆವು. ಈಗ ಮತ್ತೆ ಕಾಣುತ್ತಿದ್ದೇವೆ. ಈ ಭಟ್ಟಂಗಿಗಳ ಸಾಲಿಗೆ ಈಗ ಬುದ್ಧಿಜೀವಿಗಳೂ ಸೇರುತ್ತಿದ್ದಾರೆ; ಜ್ಞಾನ, ಸಂಶೋಧನೆಗಳ ಕೇಂದ್ರಗಳೆನಿಸಿದ ಸಂಸ್ಥೆಗಳ ನಿರ್ದೇಶಕರು ಮಿನಿ ಡಿಕ್ಟೇಟರುಗಳಾಗಿ ಆಳುವ ಪಕ್ಷದ ಸೇವೆಯಲ್ಲಿ ತಮ್ಮ ನಮ್ರ ಕಾಣಿಕೆ ಸಲ್ಲಿಸುತ್ತಿದ್ದಾರೆ.

ಲಂಡನ್ ಉತ್ಸವದಲ್ಲಿ ಪ್ರಖ್ಯಾತ ನಾಟಕಕಾರ ಪ್ರಸನ್ನರವರ ನಿರ್ದೇಶನದ "ತುಘಲಕ್" ನಾಟಕದ ಪೂರ್ವಯೋಜಿತ ಪ್ರದರ್ಶನ ದಿಲ್ಲಿಯ "ರಾಷ್ಟ್ರೀಯ ನಾಟಕ ಶಾಲೆ" ಯ ನಿರ್ದೇಶಕರ ಅಭೀಪ್ಸೆಗನುಗುಣವಾಗಿ ರದ್ದಾದ ಸುದ್ದಿಯ ಹಿಂದೆಯೇ ಮತ್ತೊಂದು ಇಂತಹುದೆ ಸುದ್ದಿ ಬಂದಿದೆ.

ಭಾರತೀಯ ಐತಿಹಾಸಿಕ ಸಂಶೋಧನಾ ಪರಿಷತ್ತು (I. C. H. R.) "ಇಂಡಿಯನ್ ಹಿಸ್ಟೋರಿಕಲ್ ರಿವ್ಯೂ" ಎಂಬ ನಿಯತಕಾಲಿಕ ಪ್ರಕಟಿಸುತ್ತಿದೆ. ಇತ್ತೀಚೆಗೆ ಮುದ್ರಿತವಾದ ಈ ಪತ್ರಿಕೆಯ ಸಂಚಿಕೆಯನ್ನು ಪರಿಷತ್ತಿನ ಅಧ್ಯಕ್ಷರ ಆಜ್ಞೆಯಂತೆ ವಾಪಸ್ಸು ಪಡೆದು ಅದರ ವಿತರಣೆಯನ್ನು ತಕ್ಷಣ ನಿಲ್ಲಿಸಲಾಯಿತು. ಇದಕ್ಕೆ ಕಾರಣ, ಆ ಸಂಚಿಕೆಯಲ್ಲಿ ಆಳುವ ಪಕ್ಷಕ್ಕೆ ಹಾಗೂ ಅದರ ದಾಸಾನುದಾಸರಿಗೆ ಅಪಥ್ಯವಾಗುವ ಒಂದು ಲೇಖನವಿತ್ತು. ಡಾ|| ಎಸ್. ಗೋಪಾಲ್ ಎಂಬುವರು ಬರೆದ ನೆಹರೂರ ಜೀವನ ಚರಿತ್ರೆಯ ಎರಡನೇ ವಿಮರ್ಶೆ ಆ ಲೇಖನ. ಲೇಖಕರು ಪಾರ್ಥಾ ಚಟರ್ಜಿ. ಆ ಲೇಖನದಲ್ಲಿ ಡಾ|| ಗೋಪಾಲ್‌ರವರು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಹರೂ ವಹಿಸಿದ ಪಾತ್ರದ ಮೌಲ್ಯಮಾಪನಕ್ಕೆ ಬಳಸಿದ ಸೈದ್ಧಾಂತಿಕ ಹಾಗೂ ವೈಧಾನಿಕ ಚೌಕಟ್ಟು ಸರಿಯಾಗಿಲ್ಲ ಎಂದು ಚೆನ್ನಾಗಿ ವಾದಿಸಲಾಗಿತ್ತು. ಅಲ್ಲದೆ ಸಮಾಜವಾದ ಹೇಳುತ್ತಾ ಬಂಡವಾಳಶಾಯಿಯನ್ನು ಕಟ್ಟಿದ್ದು ಇತ್ಯಾದಿ ವೈರುಧ್ಯಗಳ ನಡುವೆಯೂ ನೆಹರೂ ಮುಂದುವರಿಯಲು ಹೇಗೆ ಸಾಧ್ಯವಾಯಿತು? ತಾನು ಹೇಳುವುದಕ್ಕೂ ಮಾಡುವುದಕ್ಕೂ ಅಂತರವಿರಲು ಅವರಲ್ಲಿದ್ದ ಗೊಂದಲ ಕಾರಣವೇ, ಗೋಸುಂಬೆತನ ಕಾರಣವೇ ಅಥವಾ ಅದು ಕೇವಲ ಆತ್ಮ ವಂಚನೆಯೇ ಎಂಬಿತ್ಯಾದಿ ಪ್ರಶ್ನೆಗಳನ್ನು ಆ ಲೇಖನದಲ್ಲಿ ಎತ್ತಲಾಗಿತ್ತು. ನೆಹರೂರವರ ಈ ಪರಸ್ಪರ ವಿರುದ್ಧ ಸ್ವಭಾವವನ್ನು ವಿಶ್ಲೇಷಿಸುವ ಧೈರ್ಯವನ್ನು ಡಾ. ಗೋಪಾಲ್ ತೋರಿಸಿಲ್ಲ ಎಂದೂ ಟೀಕೆ ಮಾಡಲಾಗಿತ್ತು. ಪರಿಷತ್ತಿನ ಅಧ್ಯಕ್ಷರಾಗಿ ಇತ್ತೀಚೆಗೆ ನೇಮಕಗೊಂಡ ಕಾಂಗ್ರೆಸ್ (ಐ) ಸಂಸತ್ ಸದಸ್ಯ ಲೋಕೇಶ್ ಚಂದ್ರ ಈ ಗಂಭೀರ ಲೇಖನದ ಬಗ್ಗೆ "ರಾಜಕೀಯ ಅಭ್ಯಂತರ" ಎತ್ತಿದರಂತೆ. ಪರಿಣಾಮವಾಗಿ ಅದರ ಪ್ರಕಟಣೆ ನಿಂತಿತು. ಆದರೆ ಸ್ವತಃ ಡಾ. ಗೋಪಾಲ್ ಸೇರಿದಂತೆ ಹಲವು ಸಂಶೋದಕರ ಪ್ರತಿಭಟನೆಯಿಂದಾಗಿ ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಈ ನಿರ್ಬಂಧವನ್ನು ಹಿಂದಕ್ಕೆ ಪಡೆಯಬೇಕಾಗಿ ಬಂತು.

ಈ ಸಂದರ್ಭದಲ್ಲಿ ಜನತಾಪಕ್ಷದ ಆಡಳಿತ ಕಾಲದಲ್ಲಿ ನಡೆದ ಒಂದುಘಟನೆಯನ್ನು ನೆನಪಿಸಿಕೊಳ್ಳಬಹುದು. ಆಗ ಆರ್. ಎಸ್. ಎಸ್. ನ ನಾಯಕ ನಾನಾಜಿ ದೇಶಮುಖ್ ಆಗಿನ ಪ್ರಧಾನಿ ಮೊರಾರ್ಜಿಯವರಿಗೆ ಪತ್ರ ಬರೆದು ಇತಿಹಾಸಿಕ ಸಂಶೋಧನಾ ಪರಿಷತ್ತು ಹಾಗೂ ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಪರಿಷತ್ತು ಪ್ರಕಾಶಿಸಿದ ಇತಿಹಾಸ ಪುಸ್ತಕಗಳನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಮಾಡಿದ್ದರು. ಆಗ ಅವರ ಉದ್ದೇಶ ಭಾರತದ ಚರಿತ್ರೆ ಹಿಂದೂಮಯವಾಗಬೇಕೆಂದಿತ್ತು. ಈಗ ಇವರ ಉದ್ದೇಶ ಭಾರತದ ಚರಿತ್ರೆ ನೆಹರೂಮಯವಾಗಿರಬೇಕೆಂದು. ಒಟ್ಟಿನಲ್ಲಿ ನಿಷ್ಪಕ್ಷ ಸಂಶೋಧನೆಗಳು ಆಳುವ ವರ್ಗಗಳಿಗೆ ಯಾವಾಗಲೂ ಅಪಾಯಕಾರಿಯಾಗಿಯೇ ಕಾಣುತ್ತವೆ.

ಕೇರಳ

ವಿಕೇಂದ್ರೀಕರಣವೆಂದರೆ ಆಳುವ ರಂಗಕ್ಕೆ ನಡುಕ !

ಕೇರಳದ ಆಳುವ ರಂಗದ ನಾಯಕರು ಜಿಲ್ಲಾ ಪರಿಷತ್ತು ಕಾನೂನಿನ ಪ್ರಸ್ತಾಪವೆತ್ತಿದಾಗಲೆಲ್ಲಾ ಭಯಗೊಳ್ಳುತ್ತಾರೆ. ಇದಕ್ಕೆ ಇತ್ತೀಚೆಗೆ ಅಂದರೆ ಆಗಸ್ಟ್ 13 ರಂದು ಕೇರಳ ವಿಧಾನ ಸಭೆಯಲ್ಲಿ ಸ್ಪಷ್ಟವಾಗಿ ಸಾಬೀತಾಯಿತು. ಆ ದಿನ ವಿಧಾನ ಸಭೆಯಲ್ಲಿ ಕೇವಲ ಠರಾವುಗಳ ಮೇಲೆ ಚರ್ಚೆಯಿತ್ತು. ಪ್ರತಿಯೊಂದಕ್ಕೆ 50 ನಿಮಿಷ ನಿಗದಿಪಡಿಸಲಾಗಿತ್ತು. ಮೊದಲಿನ ಠರಾವು ಸಿ.ಪಿ.ಐ. (ಎಂ) ಸದಸ್ಯರೊಬ್ಬರದ್ದು. ಮುಚ್ಚಿದ್ದ ಗೇರು ಕಾರ್ಖಾನೆಗಳನ್ನು ರಾಷ್ಟ್ರೀಕರಿಸುವ ಬೇಡಿಕೆಯದ್ದು. ಅದನ್ನು ಮತಕ್ಕೆ ಹಾಕಿ ತಿರಸ್ಕರಿಸಲಾಯಿತು. ಎರಡನೇಯದ್ದು ಆಳುವ ರಂಗದ ಸದಸ್ಯರೊಬ್ಬರದ್ದು—ಹರಿಜನ, ಆದಿವಾಸಿ ಹಾಗೂ ಮೀನುಗಾರರ ಕೇರಿಗಳಿಗೆ ಕುಡಿಯುವ ನೀರಿನ ಪೂರೈಕೆ ಬಗ್ಗೆ. ಇದನ್ನು ಎಡ ಪ್ರಜಾಪ್ರಭುತ್ವ ರಂಗದ ಸದಸ್ಯರೂ ಬೆಂಬಲಿಸಿದ್ದರಿಂದ ಹೆಚ್ಚು ಚರ್ಚೆಯಿಲ್ಲದೆ ಅದನ್ನು ಅಂಗೀಕರಿಸಬಹುದಿತ್ತು. ಆದರೆ ನಂತರದ ಠರಾವು ಸಿ.ಪಿ.ಐ (ಎಂ) ಸದಸ್ಯರದಾಗಿದ್ದು ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆ ನಡೆಸುವ ಕುರಿತಾಗಿತ್ತು. ಅದರ ಪ್ರಸ್ತಾಪವೇ ಬರದಂತೆ ಮಾಡಲು ಆಳುವ ರಂಗದ ಸದಸ್ಯರು ಬೇಕೆಂದೇ ಎರಡನೇ ಠರಾವಿನ ಮೇಲೆ ಅನಗತ್ಯವಾಗಿ ಚರ್ಚೆಯನ್ನು ಅತ್ತಿತ್ತ ಜಗ್ಗಾಡಿದರು. ಯಾರೂ ವಿರೋಧಿಸದಿದ್ದ ಠರಾವಿನ ಮೇಲಿನ ಚರ್ಚೆಗೆ 'ಉತ್ತರ' ನೀಡಲು ಮಂತ್ರಿಗಳಿಗೆ 20 ನಿಮಿಷಗಳು ಬೇಕಾಯಿತು. ಒಟ್ಟಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆ ನಡೆಸುವ ಕುರಿತಾದ ಠರಾವನ್ನು ಮಂಡಿಸಿದರೆ ತಮಗೆ ಪೀಕಲಾಟವಾಗುತ್ತದೆಯೆಂದು ಆ ಠರಾವನ್ನು ಮಂಡಿಸುವ ಹಕ್ಕನ್ನೇ ವಿರೋಧಪಕ್ಷಗಳಿಗೆ ನಿರಾಕರಿಸಲಾಯಿತು. ವಿಕೇಂದ್ರೀಕರಣವೆಂದರೆ ಕಾಂಗ್ರೆಗಳಿಗೆ ಎಷ್ಟೊಂದು ಭಯ !

ಈ ನಡುವೆ ಆಗಸ್ಟ್ ಎರಡನೇ ವಾರದಲ್ಲಿ ಕೇರಳದಲ್ಲಿ ಸಾಮೂಹಿಕ ಜನ ಹೋರಾಟಗಳ ಉಬ್ಬರವೇ ಬಂದಂತಿತ್ತು. ಕೃಷಿ ಕಾರ್ಮಿಕರು ತಮ್ಮ ಪೆಂಶನ್ ಹಾಗೂ ಇತರ ಸಮಸ್ಯೆಗಳ ಬಗ್ಗೆ, ರೈತರುಗೊಬ್ಬರಕ್ಕೆ ಸಬ್ಸಿಡಿ ಬಗ್ಗೆ, ಮೀನುಗಾರರ ಯಾಂತ್ರಿಕ ಟ್ರಾಲರ್‌ಗಳನ್ನು ಸೀಮಿತಗೊಳಿಸುವ ಕುರಿತು, ಗೇರು ಬೀಜ ಹಾಗೂ ಹೆಂಚು ಕಾರ್ಖಾನೆ ಕಾರ್ಮಿಕರು ಮುಚ್ಚಿದ ಕಾರ್ಖಾನೆಗಳನ್ನು ತೆರೆಸಲು, ಸರಕಾರೀ ನೌಕರರು ಹಾಗೂ ಅಧ್ಯಾಪಕರು ಒಂದು ತಿಂಗಳ ವೇತನವನ್ನು ಬೋನಸ್ಸಾಗಿ ಕೊಡಬಾರದೆಂಬ ಸರಕಾರದ ನಿರ್ಣಯವನ್ನು ವಿರೋಧಿಸಿ, ಪತ್ರಿಕಾಕರ್ತರು ಬಿಹಾರದ ಕರಾಳ ಶಾಸನದ ವಿರುದ್ಧ, ದುಡಿಯುವ ಮಹಿಳೆಯರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಹಾಗೂ ರೈಲ್ವೇ ಕಾರ್ಮಿಕರು ತಮ್ಮ 52 ಸಹೋದ್ಯೋಗಿಗಳನ್ನು ಹೈಕೋರ್ಟ್ ಆದೇಶದಂತೆ ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ವ್ಯಾಪಕ ಪಿಕೆಟಿಂಗ್, ಧರಣಿ ಸತ್ಯಾಗ್ರಹ ಇತ್ಯಾದಿ ನಡೆಸಿದರು. ಹಲವು ದಿನಗಳಿಂದ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ಚಳುವಳಿ ನಡೆಸುತ್ತಿದ್ದ ವಿದ್ಯಾರ್ಥಿಗಳು ತಮ್ಮ ಚಳುವಳಿಯಲ್ಲಿ ಯಶಸ್ಸು ಪಡೆದಿದ್ದಾರೆ. ವಿದ್ಯಾರ್ಥಿಗಳ ಹೋರಾಟವನ್ನು ಬಗ್ಗು ಬಡಿಯಲಾಗುವುದೆಂದು ಸಾರಿದ ಸರಕಾರದ ಗೃಹ ಮಂತ್ರಿಗಳೇ ಆಗಸ್ಟ್ 17 ರಂದು ಕರೆದ ಸಮ್ಮೇಳನದಲ್ಲಿ ಏಳು ಅಂಶಗಳ ಬಗ್ಗೆ ಇತ್ಯರ್ಥಕ್ಕೆ ಬರಲಾಯಿತು. ಆಗಸ್ಟ್ 18 ರಂದು ವಿದ್ಯಾರ್ಥಿಗಳು ರಾಜ್ಯದಾದ್ಯಂತ ವಿಜಯೋತ್ಸವ ಆಚರಿಸಿದರು.

ಅಖಿಲ ಭಾರತ ಮುಷ್ಕರಕ್ಕೆ ಕಲ್ಲಿದ್ದಲು ಕಾರ್ಮಿಕರ ಸಿದ್ಧತೆ

ಆಗಸ್ಟ್ 21-22 ರಂದು ಧನಬಾದ್‌ನಲ್ಲಿ ನಡೆದ ಅಖಿಲ ಭಾರತ ಕಲ್ಲಿದ್ದಲು ಗಣಿ ಕಾರ್ಮಿಕರಸಮಾವೇಶದಲ್ಲಿ ದೇಶದ ಏಳು ಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರ ಪರವಾಗಿ ಭಾಗವಹಿಸಿದ್ದ ಏಳು ನೂರಕ್ಕೂ ಮಿಕ್ಕಿದ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಖಿಲ ಭಾರತ ಮಟ್ಟದ ಹೋರಾಟಗಳನ್ನು ನಡೆಸಬೇಕೆಂದು ನಿರ್ಧರಿಸಿದರು. ಈ ಎರಡು ದಿನ ಸಮಾವೇಶದಲ್ಲಿ ಗಣಿ ಕಾರ್ಮಿಕರ ಜೀವನ ಮಟ್ಟ ಸುಧಾರಿಸುವುದರ ಬಗ್ಗೆ, ರಕ್ಷಣಾ ನಿಯಮಗಳ ಉಲ್ಲಂಘನೆಯಿಂದಾಗಿ ಗಣಿಗಳಲ್ಲಿ ಹೆಚ್ಚುತ್ತಿರುವ ಅಪಘಾತಗಳ ಬಗ್ಗೆ, ಕಲ್ಲಿದ್ದಲು ಕೈಗಾರಿಕೆಯ ಅಧಿಕಾರಿಗಳು ಹಾಗೂ ಕಂಟ್ರಾಕ್ಟರುಗಳು ಸೇರಿ ಕಂಟ್ರಾಕ್ಟ್ ಪದ್ಧತಿಯ ಮೂಲಕ ಗಣಿ ಕಾರ್ಮಿಕರನ್ನು ಕೊಳ್ಳೆ ಹೊಡೆಯುವ ವೈಖರಿಯ ಬಗ್ಗೆ ದೀರ್ಘ ಚರ್ಚೆ ನಡೆಸಿ ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಸತತವಾದ ಹಾಗೂ ಸಂಯುಕ್ತ ಹೋರಾಟ ನಡೆಸಬೇಕೆಂದು ನಿರ್ಧರಿಸಲಾಯಿತು.

ಈ ರೀತಿ ಈಗಾಗಲೇ ಬಿ.ಹೆಚ್. ಇ. ಎಲ್., ಉಕ್ಕು ಹಾಗೂ ಕಲ್ಲಿದ್ದಲು ಕಾರ್ಮಿಕರ ಅಖಿಲ ಭಾರತ ಸಮಾವೇಶಗಳು ನಡೆದು ಅವರ ಹೋರಾಟಗಳಿಗೆ ಒಂದು ನಿಶ್ಚಿತ ಸ್ವರೂಪ ಕೊಡುವಲ್ಲಿ ಯಶಸ್ವಿಯಾಗಿವೆ. ಇದನ್ನು ಮುಂದುವರೆಸಿ ಮುಂದಿನ ತಿಂಗಳು 9 ಹಾಗೂ 10 ರಂದು ಹೈದರಾಬಾದಿನಲ್ಲಿ ಅಖಿಲ ಭಾರತದ ಸಾರ್ವಜನಿಕ ವಲಯದ ಕಾರ್ಮಿಕರ ಸಮಾವೇಶ ನಡೆಸಿ ಸರಕಾರದ ವೇತನ ಸ್ತಂಭನ ನೀತಿಯ ವಿರುದ್ಧ ದೇಶವ್ಯಾಪೀ ಆಂದೋಲನಕ್ಕೆ ಸಿದ್ಧತೆ ನಡೆಸಬೇಕೆಂದು ರಾಷ್ಟ್ರೀಯ ಆಂದೋಳನ ಸಮಿತಿ ನಿರ್ಧರಿಸಿದೆ. ○

ಬರಗಾಲದ ಭೀತಿ - ಪರಿಹಾರಕ್ಕೆ ಮನವಿ

ಬಿಜಾಪುರ ಜಿಲ್ಲೆಯ ಬಹುಭಾಗ ಅದರಲ್ಲೂ ಬಿಜಾಪುರ, ಸಿಂದಗಿ, ಇಂಡಿ, ಬಾಗೇವಾಡಿ ತಾಲ್ಲೂಕುಗಳು ಮಳೆ ಅಭಾವದಿಂದಾಗಿ ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿವೆ. ಮೇ-ಜೂನ್ ತಿಂಗಳಲ್ಲಿ ಮಳೆಯಾದಾಗ, ರೈತರೆಲ್ಲ ಮುಂಗಾರಿ ಬೀಜ ಬಿತ್ತಿದ್ದರು. ಅನಂತರ ಮಳೆಯಿಲ್ಲವಾದ್ದರಿಂದ ಬೆಳೆಗಳು ಒಣಗುತ್ತಿವೆ. ದನ ಕರುಗಳಿಗೆ ಮೇವು ಸಿಗುತ್ತಿಲ್ಲ, ಕುಡಿಯಲು ನೀರಿಲ್ಲ. ಸಾವಿರಾರು ಜನ ಊರು ಬಿಟ್ಟು ಹೋಗುವ ಪರಿಸ್ಥಿತಿ ಉಂಟಾಗಿದೆ. ಜಿಲ್ಲಾ ರೈತ ಸಂಘ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಜಿಲ್ಲೆಯ ರೈತರ ಗಂಭೀರ ಪರಿಸ್ಥಿತಿಯನ್ನು ಸರಕಾರದ ಗಮನಕ್ಕೆ ತಂದು ಕೂಡಲೇ ಪರಿಹಾರ ಕಾಮಗಾರಿ ಪ್ರಾರಂಭಿಸಿ ಊರು ಬಿಟ್ಟು ಹೋಗುವ ಜನರನ್ನು ತಡೆಯಬೇಕೆಂದೂ, ಆಲಮಟ್ಟಿ ಯೋಜನೆಯನ್ನು ಪೂರ್ಣಗೊಳಿಸುವ, ಅದಕ್ಕಾಗಿ ಕಾಲುವೆ ತೋಡುವ ಕೆಲಸಗಳನ್ನು ಕೈಗೊಳ್ಳಬೇಕೆಂದೂ ಒತ್ತಾಯ ಪಡಿಸಿವೆ. ಜಿಲ್ಲಾ ರೈತ ಸಂಘ ಮತ್ತು ಸಿ.ಪಿ.ಐ. (ಎಂ) ಸರಕಾರಕ್ಕೆ ಮನವಿ ಸಲ್ಲಿಸಿ, ಸರಕಾರ ಪರಿಹಾರ ಕಾರ್ಯ ಕೈಗೊಳ್ಳದಿದ್ದರೆ ಹೋರಾಟ ಮಾಡಲಾಗುವುದೆಂಬ ಎಚ್ಚರಿಕೆ ನೀಡಿವೆ.

ಎಸ್. ಎಫ್. ಐ. ಚಟುವಟಿಕೆಗಳು

ಕಾರ್ಯದರ್ಶಿ ಮಂಡಲಿಯ ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್.ಐ.) ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸಭೆ ಆಗಸ್ಟ್ 20 ರಿಂದ 22ರ ವರೆಗೆ ಬೆಂಗಳೂರಿನಲ್ಲಿ ಸಭೆ ಸೇರಿತ್ತು.

ಬಿ.ಸಿ ಎಂ. ಹಾಸ್ಟೆಲ್‌ಗಳಲ್ಲಿ ಕ್ಯಾರಿ ಓವರ್ ಮೂಲಕ ಬಡ್ತಿ ಪಡೆದ ವಿದ್ಯಾರ್ಥಿಗಳಿಗೆ ಮರುಪ್ರವೇಶ ನಿರಾಕರಿಸಿರುವುದನ್ನು ಸಭೆ ಖಂಡಿಸಿದೆ. (23–8–82 ರಿಂದ 3 ರವರೆಗೆ ಬೆಂಗಳೂರಿನಲ್ಲಿ ಎಸ್ ಎಫ್.ಐ. ನೇತೃತ್ವದಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸಲಾಗಿತ್ತು.)

ದ್ವಿತೀಯ ಪಿ ಯು. ಸಿ ತರಗತಿಗೆ ಉಪಪಠ್ಯ ಪುಸ್ತಕವಾಗಿ ಸಂಬಂಧಗಳು ಕಥಾಸಂಕಲನವನ್ನು ಸರಕಾರ ರದ್ದು ಮಾಡಿರುವುದನ್ನು ಸಭೆ ಖಂಡಿಸಿದೆ.

ಬಿಹಾರ ಸರಕಾರದ ಪತ್ರಿಕಾ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸಭೆಯು ಒತ್ತಾಯಿಸಿದ್ದು, ಪಾಟ್ನಾದಲ್ಲಿ ಪತ್ರಕರ್ತರ ಮೇಲೆ ನಡೆದ ಪೋಲಿಸ್ ದಬ್ಬಾಳಿಕೆಯನ್ನು ಖಂಡಿಸಿದೆ.

ಕೇಂದ್ರ ಸರಕಾರದ ಆರೋಗ್ಯ, ಶಿಕ್ಷಣ, ಸಂಶೋಧನಾ ಸಂಸ್ಥೆಗಳಿಗೆ ಸಂಬಂಧಿಸಿದ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸಭೆಯು ತಂತಿ ಸಂದೇಶದ ಮೂಲಕ ಪ್ರಧಾನ ಮಂತ್ರಿಯನ್ನು ಒತ್ತಾಯಿಸಿದೆ.

ಬೆಂಗಳೂರು :

ಬಿ. ಸಿ. ಎಂ. ಹಾಸ್ಟಲ್‌ಗಳಲ್ಲಿ ಕ್ಯಾರಿ ಓವ್ಹರ್ ಪಡೆದ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನಿರಾಕರಿಸಿರುವುದನ್ನು ಖಂಡಿಸಿ 31-8-82 ರಂದು ಎಸ್. ಎಫ್. ಐ. ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು.

ಮೆರವಣಿಗೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ಕಚೇರಿಯ ಮುಂದೆ 10 ನಿಮಿಷ ಪ್ರತಿಭಟನೆ ವ್ಯಕ್ತಪಡಿಸಿ, ಅಲ್ಲಿಂದ ವಿಧಾನ ಸೌಧಕ್ಕೆ ತೆರಳಿ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಸಚಿವ ಪಿ. ವೆಂಕಟರಮಣ ಅವರಿಗೆ ಮನವಿ ಸಲ್ಲಿಸಿದರು.

ವಿಧಾನ ಸೌಧದೆದರು ಆಗಸ್ಟ್ 23 ರಿಂದ ಆರಂಭವಾಗಿದ್ದ ಸರದಿ ಉಪವಾಸ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿರುವ ನಗರ ಸಮಿತಿಯು ಮುಂದಿನ ಕ್ರಮವನ್ನು ಸಧ್ಯದಲ್ಲೇ ನಿರ್ಧರಿಸಲಿದೆ.

ಸೆಂಟ್ರಲ್ ಕಾಲೇಜು ವಿದ್ಯಾರ್ಥಿಗಳಿಂದ ತರಗತಿ ಬಹಿಷ್ಕಾರ :

31-8-82 ರಂದು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ವಿದ್ಯಾರ್ಥಿಗಳ ಸಭೆಯನ್ನು ನಡೆಸಿದರು. 80-81ನೇ ಸಾಲಿನಲ್ಲಿ ಪ್ರಾರಂಭಿಸಿದ ಹೊಸ ಕೋರ್ಸುಗಳಿಗೆ ಮಾನ್ಯತೆ, ಪ್ರಯೋಗಾಲಯ ವ್ಯವಸ್ಥೆ, ಉಪನ್ಯಾಸಕರ ನೇಮಕ ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ಈ ಪ್ರತಿಭಟನೆ ನಡೆಯಿತು. ನಂತರ ನಡೆದ ಸಭೆಯನ್ನುದ್ದೇಶಿಸಿ ಎಸ್. ಎಫ್.ಐ. ನಗರ ಸಮಿತಿ ಕಾರ್ಯದರ್ಶಿ ಕಾಂ| ಜಿ. ಎನ್. ಮೋಹನ್, ರಾಜ್ಯ ಸಮಿತಿ ಉಪಾಧ್ಯಕ್ಷ ಕಾಂ| ರಾಜಣ್ಣ ಮಾತನಾಡಿದರು.

ಈ ಕುರಿತು ಉಪಕುಲಪತಿಯವರೊಡನೆ ನಡೆದ ಮಾತುಕತೆಯಲ್ಲಿ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದರಿಂದ ಮುಷ್ಕರವನ್ನು ಸೆಪ್ಟೆಂಬರ್ 15ರ ವರೆಗೆ ಮುಂದೂಡಲಾಗಿದೆ.

ಸೆಂಟ್ರಲ್ ಕಾಲೇಜಿನಲ್ಲಿ ಎಸ್.ಎಫ್.ಐ. ಶಾಖೆ :

1-9-82 ರಂದು ಸೆಂಟ್ರಲ್ ಕಾಲೇಜಿನಲ್ಲಿ ಎಸ್. ಎಫ್. ಐ. ಶಾಖೆಯನ್ನು ಪ್ರಾರಂಭಿಸಲಾಯಿತು. ಸಂಚಾಲಕರಾಗಿ ಶಿವಸ್ವಾಮಿ, ಸಹ ಸಂಚಾಲಕರಾಗಿ ದೇವರಾಜ್ ಮತ್ತು ಕೀರ್ತಿ ಅವರು ಆಯ್ಕೆಯಾದರು. ಈ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ಕಾಂ| ಮೋಹನ್ ಮತ್ತು ಎಸ್. ಆರಾಧ್ಯ ಮಾತನಾಡಿದರು.

ಹಾಸ್ಟೆಲ್ ಸೌಲಭ್ಯಕ್ಕೆ ಒತ್ತಾಯ :

ಸರಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ವಿದ್ಯಾರ್ಥಿ ನಿಲಯದ ಹರಿಜನ–ಗಿರಿಜನ ವಿದ್ಯಾರ್ಥಿಗಳು ಇನ್ನೊಂದು ಹಾಸ್ಟೆಲ್‌ನ ಸ್ಥಾಪನೆಗೆ ಒತ್ತಾಯಿಸಿ 2-9-82 ರಂದು ಮೆರವಣಿಗೆ ನಡೆಸಿದರು.

ಈಗಿರುವ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿದ್ದು, ನಿಲಯದ ಸೌಲಭ್ಯಗಳು ಎಲ್ಲಾ ವಿದ್ಯಾರ್ಥಿಗಳಿಗೂ ದೊರಕುತ್ತಿಲ್ಲ. ಊಟ-ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲ.

ಮೆರವಣಿಗೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಸಚಿವರನ್ನು ಭೇಟಿ ಮಾಡಿ ಸಮಸ್ಯೆಗಳ ಕುರಿತು ಚರ್ಚಿಸಿದರು.

ದಿನಾಂಕ 3-9-82 ರಂದು ಪಿ. ವೆಂಕಟರಮಣ ಅವರೊನೆ ನಡೆದ ಚರ್ಚೆಯಲ್ಲಿ ವಿದ್ಯಾರ್ಥಿ ಸಂಘದ ಚುನಾವಣಾ ವಿಷಯವೊಂದನ್ನು ಬಿಟ್ಟು ಉಳಿದೆಲ್ಲ ಬೇಡಿಕೆಗಳನ್ನು ಈಡೇರಿಸಲು ಸಚಿವರು ಒಪ್ಪಿದ್ದಾರೆ. ಸಚಿವರೊಡನೆ ನಡೆದ ಮಾತುಕತೆಯಲ್ಲಿ ಕಾಂ| ಎನ್. ರಾಜಣ್ಣ ಭಾಗವಹಿಸಿದ್ದರು.

ಮುಳಬಾಗಿಲು :

ಕೋಲಾರ ಜಿಲ್ಲೆಯ ಮುಳುಬಾಗಿಲುನಲ್ಲಿ ಆಗಸ್ಟ್ 17 ರಂದು ಸರಕಾರಿ ಪ್ರೌಢ ಶಾಲೆಯ ಎಸ್. ಎಫ್. ಐ. ಘಟಕವನ್ನು ರಚಿಸಲಾಯಿತು. ಈ ಕುರಿತು ನಡೆದ ಸಭೆಯಲ್ಲಿ ಕಾಂ| ಹರೀಂದ್ರ, ಬೈಯಾರೆಡ್ಡಿ ಮತ್ತು ಕಾಂ| ರಾಜಣ್ಣ ಹಾಜರಿದ್ದು ಎಸ್.ಎಫ್.ಐ. ಧ್ಯೇಯೋದ್ದೇಶಗಳ ಕುರಿತು ವಿವರಿಸಿದರು. ವೆಂಕಟಮುನಿ, ಆರ್.ಗಣೇಶ್, ಆರ್. ಶ್ರೀನಿವಾಸ್‌ರೆಡ್ಡಿ, ಜಿ. ಸತ್ಯನಾರಾಯಣಪ್ಪ, ಬಿ. ಎಸ್. ಕಾಶಿ ವಿಶ್ವನಾಥ ಮತ್ತು ಜಿ. ಸುನಿಲ್ ಕುಮಾರ್ ಇವರುಗಳು ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ.

ಇಲ್ಲಿಯ ಎಂ. ಇ. ಎಸ್. ಕಾಲೇಜಿನಲ್ಲಿ ಆಗಸ್ಟ್ 17 ರಂದು ವಿದ್ಯಾರ್ಥಿಗಳ ಸಭೆ ನಡೆದು ಎಸ್.ಎಫ್.ಐ. ಘಟಕವನ್ನು ರಚಿಸಲಾಯಿತು. ಸಂಚಾಲಕರಾಗಿ ಶ್ರೀನಿವಾಸರೆಡ್ಡಿ, ಸಹ ಸಂಚಾಲಕರಾಗಿ ಆರ್. ಶ್ರೀನಿವಾಸ್, ಲೋಕನಾಥ ಹಾಗೂ ಎಸ್. ವಿ. ಚಲಪತಿಯವರುಗಳನ್ನು, 14 ಮಂದಿ ಸಮಿತಿ ಸದಸ್ಯರನ್ನು ಸಭೆ ಆಯ್ಕೆ ಮಾಡಿತು.

ತಾಯಲೂರು :

ತಾಯಲೂರಿನ (ಕೋಲಾರ ಜಿಲ್ಲೆ) ಪ್ರೌಢಶಾಲೆಯಲ್ಲಿ ಆಗಸ್ಟ್ 18 ರಂದು ಎಸ್ ಎಫ್. ಐ ಘಟಕ ಪ್ರಾರಂಭಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಲ್. ನಾರಾಯಣ ಅವರು ವಹಿಸಿದ್ದರು. ಪ್ರಾರಂಭದಲ್ಲಿ ಶಾಲೆಯ ಉಪಾಧ್ಯಾಯರಾದ ಶ್ರೀ ಪಾಪಣ್ಣನವರು ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಕಾಂ| ರಾಜಣ್ಣ ಮಾತನಾಡಿ ಎಸ್.ಎಫ್.ಐ ಯನ್ನು ಬಲಪಡಿಸಲು ಮನವಿ ಮಾಡಿದರು.

ಕೋಲಾರ :

ಆಗಸ್ಟ್ 19 ರಂದು ಎಸ್. ಎಫ್. ಐ.ನ ಕೋಲಾರ ಶಾಖೆಯ ನೇತೃತ್ವದಲ್ಲಿ ಬಿ. ಸಿ. ಎಂ. ಹಾಸ್ಟಲ್‌ಗಳಲ್ಲಿ ಕ್ಯಾರಿ ಓವ್ಹರ್ ಪಡೆದ ವಿದ್ಯಾರ್ಥಿಗಳ ಮರು ಪ್ರವೇಶಕ್ಕೆ ಒತ್ತಾಯಿಸಿ ನಗರದಲ್ಲಿ ಮೆರವಣಿಗೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದ ನಂತರ ವಿಶೇಷ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ನಂತರ ನಡೆದ ಸಭೆಯನ್ನುದ್ದೇಶಿಸಿ ಶಾಖೆಯ ಸಂಚಾಲಕ ಇ. ನಾರಾಯಣಸ್ವಾಮಿ ಮತ್ತು ಕಾಂ| ಎನ್. ರಾಜಣ್ಣ ಮಾತನಾಡಿದರು.

ಬಸ್ರೂರು :

ಕುಂದಾಪುರ (ದ.ಕ.) ತಾಲ್ಲೂಕಿನ ಬಸ್ರೂರಿನ ಶಾರದಾ ಕಾಲೇಜು ವಿದ್ಯಾರ್ಥಿಗಳ ಸಭೆಯಲ್ಲಿ ಎಸ್. ಎಫ್. ಐ. ಸಂಘಟನಾ ಸಮಿತಿಯೊಂದನ್ನು ರಚಿಸಲಾಯಿತು. ಈ ಕುರಿತು ನಡೆದ ಸಭೆಯನ್ನುದ್ದೇಶಿಸಿ ರಾಜ್ಯ ಸಮಿತಿ ಅಧ್ಯಕ್ಷ ಕಾಂ| ಆರ್.ಜಯಕುಮಾರ್, ಕುಂದಾಪುರ ಟೌನ್ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ ಮಾತನಾಡಿ ಎಸ್. ಎಫ್. ಐ. ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಸಂಚಾಲಕರಾಗಿ ಗಜಾನನ ಶೆಟ್ಟಿಗಾರ್ ಮತ್ತು ಬಿ. ಸಂಜೀವ ಹಾಗೂ ಹತ್ತು ಜನರ ಸಮಿತಿಯೊಂದನ್ನು ಚುನಾಯಿಸಲಾಯಿತು.

ಸಭೆಯ ಆರಂಭದಲ್ಲಿ ನಾರಾಯಣ ಆಚಾರಿ ಸ್ವಾಗತಿಸಿದರು. ಬಿ. ಸಂಜೀವ ವಂದಿಸಿದರು.

ಪುತ್ತೂರು :

ಆಗಸ್ಟ್ 22 ರಂದು ಪುತ್ತೂರಿನಲ್ಲಿ ಎಸ್.ಎಫ್ ಐ. ಸಂಘಟನಾ ಸಮಿತಿಯ ಸಭೆ ನಡೆಯಿತು. ಎಸ್. ಎಫ್. ಐ. ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ| ನಿರಂಜನ್ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸುಳ್ಯದ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಆಗಮಿಸಿದ್ದರು. ಆರಂಭದಲ್ಲಿ ಕಾಂ| ಬಿ ರಾಮಕೃಷ್ಣ ಸ್ವಾಗತಿಸಿದರು.

ಸಭೆಯ ಕೊನೆಯಲ್ಲಿ ಬಿಹಾರ್‌ನ 'ಕರಾಳ' ಪತ್ರಿಕಾ ಮಸೂದೆಯನ್ನು, ಪತ್ರಕರ್ತರ ಮೇಲೆ ಲಾಠೀ ಚಾರ್ಜ್ ಮಾಡಿರುವ ಘಟನೆಯನ್ನು ಖಂಡಿಸುವ ನಿರ್ಣಯನ್ನು ಕಾಂ| ರಾಮಕೃಷ್ಣ ಮಂಡಿಸಿದರು. ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು. ಕೊನೆಯಲ್ಲಿ ಕಾಂ| ಜೋಮನವರು ವಂದನಾರ್ಪಣೆ ಮಾಡಿದರು.

●

ಮಂಗಳೂರು:

ಕಾರ್ಮಿಕ ಇಲಾಖೆಯ ಅಸಡ್ಡೆ ನೀತಿಯ ವಿರುದ್ಧ ಹೋರಾಟ ನಡೆಸಲು ಸಾರಿಗೆ ನೌಕರರ ನಿರ್ಣಯ

ದ. ಕ. ಜಿಲ್ಲೆಯ ಅನೇಕ ಸಾರಿಗೆ ನೌಕರರಿಗೆ ಹಾಗೂ ಗ್ಯಾರೇಜ್ ಮತ್ತು ವರ್ಕ್‌ಶಾಪ್‌ಗಳಲ್ಲಿ ದುಡಿಯುವ ಕಾರ್ಮಿಕರಿಗೆ ಕಾನೂನಿನ ಸೌಲಭ್ಯ ಮತ್ತು ಕನಿಷ್ಠ ವೇತನವನ್ನು ಜಾರಿಗೊಳಿಸಲು ಜಿಲ್ಲೆಯ ಕಾರ್ಮಿಕ ಇಲಾಖೆ ವಿಫಲವಾಗಿದೆ ಮಾತ್ರವಲ್ಲದೆ ಹಲವಾರು ದೀರ್ಘ ಸಮಯದಿಂದ ಇತ್ಯರ್ಥವಾಗದೆ ಈ ಇಲಾಖೆಯ ಮುಂದಿದ್ದರೂ, ಕನಿಷ್ಠ ವೇತನ ಜ್ಯಾರಿಯಾಗಲಿಲ್ಲವೆಂಬ ದೂರುಗಳಿದ್ದರೂ ಈ ಬಗ್ಗೆ ಕಾರ್ಮಿಕ ಇಲಾಖೆ ಅಸಡ್ಡೆಯಾಗಿರುವುದನ್ನು ತಾರೀಕು 29-8-82 ರಂದು ಮಂಗಳೂರಿನಲ್ಲಿ ಸೇರಿದ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿ (ಸಿ.ಐ.ಟಿ.ಯು) ಸಭೆಯು ಖಂಡಿಸಿದೆ. ಸರಕಾರ ಕಾರ್ಮಿಕ ಇಲಾಖೆಯ ಬಗ್ಗೆ ಅಸಡ್ಡೆಯಿಂದ ನೋಡುತ್ತಿದೆ ಎಂಬುದಕ್ಕೆ ಇಲ್ಲಿನ ಕಾರ್ಮಿಕ ಇಲಾಖೆ ಕಛೇರಿಯೇ ಸಾಕ್ಷಿಯಾಗಿದೆ. ಈ ರೀತಿಯ ಅಸಡ್ಡೆ ನೀತಿಯಿಂದ ಜಿಲ್ಲೆಯ ಕಾರ್ಮಿಕರಿಗೆ ತುಂಬಾ ದ್ರೋಹವಾಗಿದೆ ಎಂಬುದನ್ನು ಗಮನಿಸಿದ ಸಭೆಯು ಲೇಬರ್ ಆಫೀಸಿನಲ್ಲಿ ಇತ್ಯರ್ಥ ಬಾಕಿ ಇರುವ ವಿವಾದಗಳನ್ನು ಕೂಡಲೇ ಇತ್ಯರ್ಥಗೊಳಿಸದಿದ್ದರೆ ಈ ಇಲಾಖೆಯ ಅಸಡ್ಡೆ ಮತ್ತು ವಿಳಂಬ ನೀತಿಯ ವಿರುದ್ಧ ಹೋರಾಟವನ್ನು ನಡೆಸಲು ತೀರ್ಮಾನಿಸಿತು. ಈ ಬಗ್ಗೆ ದಿನ ನಿಗದಿ ಮಾಡಲು ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರ ಕೊಡಲಾಯಿತು.

ಯೂನಿಯನ್‌ನ ಅಧ್ಯಕ್ಷರಾದ ಕಾಂ| ಪಿ. ರಾಮಚಂದ್ರರಾಯರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಕಾಂ| ಕೆ. ಮೂಸಬ್ಬ ಅವರು ವರದಿಯನ್ನು ಸಭೆಯ ಮುಂದಿಟ್ಟರು.

ಜಿಲ್ಲೆಯ ಸಾರಿಗೆ ನೌಕರರ, ಇಂಜಿನಿಯರಿಂಗ್ ನೌಕರರಿಗೆ ಮತ್ತು ಗ್ಯಾರೇಜ್ ಹಾಗೂ ವರ್ಕ್ ಶಾಪ್‌ಗಳಲ್ಲಿ ದುಡಿಯುವ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿ ಜಿಲ್ಲೆಯಾದ್ಯಂತ ಸಂಘಟನೆಯನ್ನು ಬಲಪಡಿಸಲು ಮುಂದಿನ ಡಿಸೆಂಬರ್ ತಿಂಗಳಲ್ಲಿ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್‌ಯೂನಿಯನ್‌ನ ಆಶ್ರಯದಲ್ಲಿ ಸಾರಿಗೆ ಇಂಜಿನಿಯರಿಂಗ್, ವರ್ಕ್‌ಶಾಪ್ ಮತ್ತು ಗ್ಯಾರೇಜ್ ಕಾರ್ಮಿಕರ ಜಿಲ್ಲಾ ಸಮ್ಮೇಳನ ನಡೆಸಬೇಕೆಂದು ನಿರ್ಣಯಿಸಲಾಯಿತು. ಇದಕ್ಕೆ ಬೇಕಾದ ಸಿದ್ಧತೆ ನಡೆಸಲು ಕಾರ್ಯಕ್ರಮವನ್ನು ತಯಾರು ಮಾಡಲು ಯೂನಿಯನ್ನಿನ ಪದಾಧಿಕಾರಿಗಳಿಗೆ ಅಧಿಕಾರ ಕೊಡಲಾಯಿತು. ಕೊನೆಗೆ ಯೂನಿಯನಿನ ಜತೆ ಕಾರ್ಯದರ್ಶಿ ಕಾಂ| ಪಿ. ಉಮೇಶ್ ಭಂಡಾರಿ ಧನ್ಯವಾದವನ್ನಿತ್ತರು.

●

ಅಕಾಲಿ ಧುರೀಣನಿಗೆ ಸುರ್ಜೀತರ ಬಹಿರಂಗ ಪತ್ರ

[ಆಗಸ್ಟ್ 4 ರಿಂದ ಅಕಾಲಿದಳ (ಲೊಂಗೋವಾಲ ಬಣ)ದ ನೇತೃತ್ವದಲ್ಲಿ ಕೆಲವು ಬೇಡಿಕೆಗಳನ್ನು ಮುಂದಿಟ್ಟು 'ಮೋರ್ಚಾ' ಪ್ರಾರಂಭವಾಗಿದೆ. ಅಕಾಲಿದಳದ ಈ ಕಾರ್ಯಕ್ರಮ ಈಗಾಗಲೇ ಗಂಭೀರವಾಗಿರುವ ಪರಿಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಬಹುದಾಗಿದೆ. ರಾಜ್ಯದ ಕೋಮು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸದಂತೆ ವಿನಂತಿಸಿ ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ| ಹರೀಕಿಷನ್ ಸಿಂಗ್ ಸುರ್ಜೀತರು ಅಕಾಲಿದಳದ ಧುರೀಣ ಸಂತ ಲಾಂಗೋವಾಲ ಅವರಿಗೊಂದು ಸುಧೀರ್ಘ ಬಹಿರಂಗ ಪತ್ರ ಬರೆದಿದ್ದಾರೆ.

ಸುಮಾರು 6000 ಶಬ್ಧಗಳನ್ನು ಒಳಗೊಂಡಿರುವ ಈ ಧೀರ್ಘ ಪತ್ರದಲ್ಲಿ ಕಾಂ| ಸುರ್ಜೀತರು ಸಿಖ್ ಜನಾಂಗದ ಧಾರ್ಮಿಕ ಬೇಡಿಕೆಗಳನ್ನು ಪಂಜಾಬ್‌ನ ಜನಸಾಮಾನ್ಯರ ಬೇಡಿಕೆಗಳೊಂದಿಗೆ ಜೋಡಿಸುವ ಅಕಾಲಿದಳದ ಗಂಡಾಂತರಕಾರಿ ನಿಲುವಿಗೆ ವಿಮಂಚನೆ ವ್ಯಕ್ತಪಡಿಸಿದ್ದಾರೆ.

ಕಾಂ| ಸುರ್ಜೀತರ ಪತ್ರದ ಸಂಕ್ಷಿಪ್ತರೂಪವನ್ನಿಲ್ಲಿ ಪ್ರಕಟಿಸುತ್ತಿದ್ದೇವೆ:]

'ಮತೀಯ ವೈಷಮ್ಯವನ್ನು ಪಂಜಾಬಿನಲ್ಲಿ ಹರಡಲು ಬಿಡಬೇಡಿ' ಎಂದು ಸಿ. ಪಿ. ಐ (ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾಂ| ಸುರ್ಜಿತ್ ಅಕಾಲಿದಳದ ಅಧ್ಯಕ್ಷ ಸಂತ ಹರಚಂದ್ ಲಾಂಗೋವಾಲ ಅವರಿಗೆ ಮನವಿ ಮಾಡಿದ್ದಾರೆ. ಆಗಸ್ಟ್ 4 ರಿಂದ ಜಾಥಾ ಹೋಗಲು ಅಕಾಲಿದಳ ನಿರ್ಧರಿಸಿದ ನಂತರ ದೀರ್ಘ ಪತ್ರವೊಂದನ್ನು ಬರೆದು ಸಿಖ್ ತೀವ್ರಗಾಮಿಗಳಿಗೆ ಇದು ಬೆಂಬಲ ನೀಡುತ್ತದೆಂದು ಎಚ್ಚರಿಸಿದ್ದಾರೆ.

ಭವಿಷ್ಯದ ಬಗ್ಗೆ ಕಾಳಜಿ

ಪಂಜಾಬಿನ ಭವಿಷ್ಯದ ಬಗ್ಗೆ ಕಾಳಜಿ ಇರುವವರೆಲ್ಲರೂ ಪ್ರಸಕ್ತ ಮತೀಯ ದ್ವೇಷದ ವಾತಾವರಣದಿಂದ ಆತಂಕಗೊಂಡಿದ್ದಾರೆ. ಇದರಿಂದಾಗಿ ಪ್ರಜಾಸತ್ತಾತ್ಮಕ ಚಳುವಳಿಗೆ ಮಾತ್ರವಲ್ಲದೆ ದೇಶದ ಐಕ್ಯತೆಗೇ ಅಪಾಯ ಒದಗಿದೆ. ತನ್ನ ಸಂಕುಚಿತ ರಾಜಕೀಯ ಲಾಭಕ್ಕಾಗಿ ಇಂತಹ ಪರಿಸ್ಥಿತಿಯ ನಿರ್ಮಾಣಕ್ಕೆ ಕಾಂಗ್ರೆಸ್ (ಐ) ನ ಪ್ರಯತ್ನಗಳನ್ನು ನಾನು ಕಡೆಗಾಣಿಸುವುದಿಲ್ಲ. ಆದರೆ ಮಿಕ್ಕ ರಾಜಕೀಯ ಶಕ್ತಿಗಳು ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ತಮ್ಮ ಕರ್ತವ್ಯ ಮಾಡುತ್ತಿವೆ ಎನ್ನುವುದು ಪ್ರಶ್ನೆಯಾಗಿದೆ.

ಅಪಾಯ ಸೂಚಕ ಪರಿಸ್ಥಿತಿ

ಪ್ರಸ್ತುತ ಅಪಾಯಕಾರಿ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಬಯಸುವ ಎಲ್ಲರೂ ಶ್ರಮಿಸಬೇಕಾಗಿದೆ. ಅಕಾಲಿ ಪಕ್ಷವು ರಾಜ್ಯದಲ್ಲಿ ದೊಡ್ಡ ವಿರೋಧ ಪಕ್ಷವಾಗಿದ್ದು ತನ್ನ ಕರ್ತವ್ಯಗಳಲ್ಲಿ ವಿಫಲವಾಗಿರುವುದಲ್ಲದೆ ತನ್ನ ಎಲ್ಲ ಉತ್ತಮ ಸಂಪ್ರದಾಯಗಳನ್ನು ಮರೆತು ವಿಚ್ಛಿದ್ರಕಾರಿ ಶಕ್ತಿಗಳಿಗೆ ಬೆಂಬಲ ನೀಡುತ್ತಿದೆ ದುರದೃಷ್ಟವಶಾತ್ ಇಂದು ನಾಯಕತ್ವದಲ್ಲಿರುವವರಲ್ಲಿ ಬಹಳಷ್ಟು ಮಂದಿ 20-30ರ ದಶಕದ ಅಕಾಲಿ ಚಳುವಳಿಯಲ್ಲಿ ಭಾಗವಹಿಸಿಲ್ಲ. ಅಂದಿನ ಅಕಾಲಿ ಚಳುವಳಿಯ ಆಶಯಗಳ ಬಗ್ಗೆ ಪರಿಚಯವಿಲ್ಲ. ಗುರುದ್ವಾರಗಳನ್ನು ಮಹಂತರಿಂದ ಮುಕ್ತಿಗೊಳಿಸುವ ಅಂದಿನ ಚಳುವಳಿಯು ರಾಷ್ಟ್ರೀಯ ಆಂದೋಲನದ ಭಾಗವಾಗಿತ್ತು. ಆದ್ದರಿಂದಲೇ ಕಾಂಗ್ರೆಸ್, ಎಡ ಹಾಗೂ ಕಮ್ಯೂನಿಸ್ಟ್ ಪಕ್ಷಗಳಿಗೆ ಬಂದವರು ಅಕಾಲಿ ಚಳುವಳಿಯಿಂದಲೇ ಆಗಿದ್ದು ಆಕಸ್ಮಿಕವೇನಲ್ಲ.

ಸಿಖ್‌ರಲ್ಲಿ ಎರಡು ಒಲವುಗಳು

ಬ್ರಿಟೀಷರ ಕಾಲದಲ್ಲೂ ಸಿಖ್‌ರಲ್ಲಿ ಎರಡು ಒಲವುಗಳಿದ್ದವು. ಭೂಮಾಲೀಕರು ರಾಜಮಹಾರಾಜರುಗಳು ಬ್ರಿಟಿಷರ ಬೆಂಬಲಿಗರಾಗಿದ್ದರೆ, ಸಾಮ್ರಾಜ್ಯಷಾಹಿ ವಿರೋಧಿಗಳನ್ನು ಅಕಾಲಿ ಪಕ್ಷ ಪ್ರತಿನಿಧಿಸುತಿತ್ತು. ಇದರಿಂದಾಗಿಯೇ ಅಕಾಲಿ ಚಳುವಳಿಯು ರಾಷ್ಟ್ರೀಯ ಆಂಧೋಲನದಲ್ಲಿ ಸಮ್ಮಿಳಿತಗೊಂಡಿತ್ತು. ಕಮ್ಯುನಿಸ್ಟ್ ಚಳುವಳಿಯನ್ನು ಕುರಿತಂತೆ ಅಕಾಲಿಗಳು ಬಹಳ ಮಟ್ಟಿಗೆ ರಷ್ಯನ್ ಕ್ರಾಂತಿಯಿಂದ ಪ್ರಭಾವಿತಗೊಂಡಿದ್ದರು.

ಮತೀಯ ಬೆಳವಣಿಗೆಗಳು

1930-32ರ ಚಳುವಳಿ ವಿಫಲವಾದ ಮೇಲೆ ಮತ್ತು ಬ್ರಿಟಿಷರು ಮತೀಯ ಪ್ರಾತಿನಿಧ್ಯ ವಿಚಾರ ಮುಂದಿಟ್ಟ ನಂತರ ಕೆಲವು ಅಕಾಲಿ ನಾಯಕರುಗಳಲ್ಲಿ ಮತೀಯ ಲಕ್ಷಣಗಳು ಕಂಡು ಬಂದವು. ಈ ಮತೀಯತೆಯಿಂದಾಗಿ ಪಾಟಿಯಾಲ ಮಹಾರಾಜನೊಂದಿಗೆ ರಾಜೀ ಮಾಡಿಕೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ಮಹತ್ವದ ಹೋರಾಟ ನಡೆಸಿದ ಬಾಬರ್ ಅಕಾಲಿಸ್‌ಗಳನ್ನು ಸ್ಮರಿಸುತ್ತೇನೆ. ಅವರಲ್ಲಿ ಅನೇಕರನ್ನು ಗುಂಡಿಟ್ಟು ಕೊಂದರು, ನೇಣು ಹಾಕಿದರು, ಜೀವಾವಧಿ ಶಿಕ್ಷೆಗೊಳಪಡಿಸಿದರು. ಆದರೆ ಅವರುಗಳೆಂದೂ ಹಿಂದೂ-ಸಿಖ್‌ರ ನಡುವೆ ತಾರತಮ್ಯವೆಣಿಸಲಿಲ್ಲ. ಬದಲಾಗಿ ಜನರನ್ನು ಬ್ರಿಟಿಷರ ಬೆಂಬಲಿಗರು ಮತ್ತು ಬ್ರಿಟಿಷರ ವಿರೋಧಿಗಳೆಂದು ಕಂಡರು. ಜೈಲಿನಿಂದ ಬಿಡುಗಡೆಯಾದ ಬಾಬರ್ ಅಕಾಲಿಗಳಲ್ಲಿ ಬಹುಮಂದಿ ಕಮ್ಯುನಿಸ್ಟ್ ಪಕ್ಷ ಸೇರಿದರೆಂಬುದು ನನಗೆ ಹೆಮ್ಮೆಯ ವಿಚಾರ.

ಚರಿತ್ರೆಯ ಪಾಠ

ಚರಿತ್ರೆಯನ್ನು ತಿರುವಿಹಾಕಿದರೆ ತಿಳಿಯುವುದೇನು ? ಅಕಾಲಿಗಳು ಪ್ರತೀಗಾಮಿಗಳೊಂದಿಗೆ ರಾಜಿಮಾಡಿಕೊಂಡಾಗಲೆಲ್ಲ ಕ್ಷೀಣಿಸಿದ್ದಾರೆ. ಮತ್ತು ಸಾಮ್ರಾಜ್ಯಷಾಹಿಗಳ ಹಾಗೂ ಆಂತರಿಕ ಪ್ರತೀಗಾಮಿಗಳ ವಿರುದ್ಧ ನಿಶ್ಚಿತ ನಿಲುವು ತೆಗೆದುಕೊಂಡಾಗಲೆಲ್ಲ ಅದರ ಘನತೆ ಹೆಚ್ಚಿದೆ. ಇತ್ತೀಚಿನ ವಿದ್ಯಮಾನಗಳು ಇದನ್ನೇ ಹೇಳುತ್ತವೆ.

ಆನಂದಪುರ ಗೊತ್ತುವಳಿ

ಆನಂದಪುರ ಗೊತ್ತುವಳಿ ಕೇವಲ ಸ್ವಾಯತ್ತತೆಯ ಬೇಡಿಕೆಯನ್ನು ಒಳಗೊಂಡಿಲ್ಲ. ಇದು ಸಿಖ್ ಮೂಲಭೂತವಾದವನ್ನು ಆಧರಿಸಿದ್ದು ಪ್ರತ್ಯೇಕವಾದದ ಬೀಜಗಳನ್ನೊಳಗೊಂಡಿದೆ. ಈ ಗೊತ್ತುವಳಿಯ ಪ್ರಕಾರ ಅಕಾಲಿದಳ ಮಾತ್ರ ಸಿಖ್‌ರನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಸಿಖ್‌ರನ್ನು ಕುರಿತಂತೆ ರಾಜಕೀಯ ಮತ್ತು ಧಾರ್ಮಿಕತೆಯನ್ನು ಪ್ರತ್ಯೇಕಿಸುವಂತಿಲ್ಲವೆಂದು ವಾದಿಸುತ್ತಾರೆ.

ತೀವ್ರಗಾಮಿಗಳಿಗೆ ಪ್ರೋತ್ಸಾಹ

ಆಂತರಿಕ ಕಚ್ಚಾಟಗಳಿಂದ ಅಕಾಲಿ ಪಕ್ಷ ಒಡೆದು ಜಗದೇವಸಿಂಗ್ ತಲವಂಡಿ ಗುಂಪು ಹೊರ ಬಂದಿತು. ನೀವು ಪಕ್ಷದ ನಾಯಕತ್ವವಹಿಸಿಕೊಂಡ ನಂತರವೂ ಪಕ್ಷವನ್ನು ಜಾತ್ಯಾತೀತತೆ, ಪ್ರಜಾಪ್ರಭುತ್ವಗಳಿಗೆ ಬದ್ಧಗೊಳಿಸುವ ಪ್ರಯತ್ನ ಮಾಡಲಿಲ್ಲ. ಬದಲಾಗಿ ತೀವ್ರಗಾಮಿಗಳನ್ನು ಪ್ರೋತ್ಸಾಹಿಸಲು ತಲವಂಡಿ ಗುಂಪಿನೊಂದಿಗೆ ಸ್ಪರ್ಧೆಗಿಳಿದು 'ಧರ್ಮ ಯುದ್ಧದ' ಘೋಷಣೆ ಕೊಟ್ಟಿರಿ. ದೇಶದಲ್ಲಿ ಅಭದ್ರತೆಯುಂಟು ಮಾಡಲು ಪ್ರಯತ್ನಿಸುತ್ತಿರುವ ಅಮೆರಿಕ, ಕೆನಡಾಗಳಿಂದ ಈ ತೀವ್ರಗಾಮಿಗಳಿಗೆ ಬೆಂಬಲ ಬರುತ್ತಿದೆ

ಸಿಖ್ಖರು ಒಂದು ರಾಷ್ಟ್ರವಲ್ಲ

ರಾಷ್ಟ್ರೀಯತೆ ಪರಿಕಲ್ಪನೆಯನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡಾಗ ಈ ಅಂಶ ತಿಳಿಯುತ್ತದೆ. ಇಂತಹುದೇ ಘೋಷಣೆಯನ್ನು ಮುಸ್ಲಿಂಲೀಗ್ ಎತ್ತಿ ಪಾಕಿಸ್ಥಾನವಾಯಿತು. ಆದರೆ ಬೆಂಗಾಲಿ ರಾಷ್ಟ್ರೀಯರು ಪಾಕೀಸ್ಥಾನೀಯರಿಂದ ಪ್ರತ್ಯೇಕಗೊಂಡರು. ಇಂದಿನ ಪಾಕೀಸ್ಥಾನದಲ್ಲೂ ಬೆಲೂಚಿ, ಸಿಂಧೀ, ಪಠಾಣ ರಾಷ್ಟ್ರೀಯರ ಪ್ರಭಲ ಚಳುವಳಿಗಳಿವೆ.

ಇಂಡಿಯಾ ವಿವಿಧ ರಾಷ್ಟ್ರೀಯತೆಗಳಿಂದ ಕೂಡಿದ ದೇಶವೆಂಬುದರಲ್ಲಿ ಸಂಶಯವಿಲ್ಲ. ಧಾರ್ಮಿಕ ನಂಬಿಕೆಗಳಿಗೆ ಹೊರತಾಗಿ ಬೆಂಗಾಲಿ, ಮಲೆಯಾಳಿ, ತೆಲುಗು, ಅಸ್ಸಾಮಿ, ಕನ್ನಡಿಗ ರಾಷ್ಟ್ರೀಯತೆಗಳಿವೆ. ನಿಮ್ಮ ದೃಷ್ಟಿಯಿಂದಲೇ ಸಿಖ್ ಧರ್ಮೀಯರು ಪ್ರತ್ಯೇಕ ರಾಷ್ಟ್ರವೆನ್ನುವುದು ಅಪಾಯಕರ. ಸಿಖ್‌ರದೊಂದು ಧಾರ್ಮಿಕ ಅಸ್ಥಿತ್ವವೇ ಹೊರತು ಪ್ರತ್ಯೇಕ ರಾಷ್ಟ್ರವಲ್ಲ.

ತೀವ್ರಗೊಳ್ಳುತ್ತಿರುವ ವರ್ಗ ವೈರುದ್ಯಗಳು

ನಾವಿಂದು ವರ್ಗ ಸಮಾಜದಲ್ಲಿ ಬದುಕುತ್ತಿದ್ದು ರಾಜಕೀಯವು ವರ್ಗ ಹಿತಾಸಕ್ತಿಗಳಿಗನುಗುಣವಾಗಿ ನಿರ್ಧರಿತವಾಗುತ್ತಿದೆ. ಬಂಡವಾಳಷಾಹಿ ವ್ಯವಸ್ಥೆಯಲ್ಲಿ ಬಿಕ್ಕಟ್ಟು ಬೆಳೆದು ವರ್ಗ ವೈರುದ್ಯಗಳು ತೀವ್ರಗೊಳ್ಳುತ್ತಿವೆ. ಇದಕ್ಕೆ ಪರಿಹಾರವನ್ನು ಧಾರ್ಮಿಕ ದ್ವಜದಡಿಯಲ್ಲಿ ಕಾಣಲು ಸಾಧ್ಯವೆ ? ಸಿಖ್‌ರಲ್ಲೂ ಶೋಷಕ – ಶೋಷಿತ ಜನರಿದ್ದಾರೆ. ಇವರಲ್ಲಿ ಅಕಾಲಿದಳ ಯಾರ ಪರ ನಿಲ್ಲ ಬಯಸುತ್ತದೆ ?

> ### ಅಕಾಲಿ ಧುರೀಣರ ಬಂಧನಕ್ಕೆ ಪ್ರತಿಭಟನೆ
>
> ವಿಚ್ಛಿದ್ರಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ನೆಪದಲ್ಲಿ ಆಗಸ್ಟ್ ೨೭ ರಂದು ನೂರಾರು ಅಕಾಲಿ ಧುರೀಣರನ್ನು ಪಂಜಾಬ್ ಸರಕಾರ ಬಂಧಿಸಿರುವುದನ್ನು ಸಿ. ಪಿ. ಐ (ಎಂ) ಕೇಂದ್ರ ಸಮಿತಿಯು ಖಂಡಿಸಿದೆ. ಸರಕಾರದ ಈ ಕ್ರಮ ಪರಿಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಬಹುದೆಂದು ಕೇಂದ್ರ ಸಮಿತಿಯು ಕಳವಳ ವ್ಯಕ್ತಪಡಿಸಿದೆ.

ಎರಡು ವಿಧದ ಬೇಡಿಕೆಗಳು

ನೀವು 'ಧರ್ಮಯುದ್ಧ'ವನ್ನು ಸಾರಿದಾಗ 45 ಬೇಡಿಕೆಗಳನ್ನಿಟ್ಟಿರಿ. ಅವುಗಳಲ್ಲಿ ಕೆಲವು ಸಿಖ್ ಅಲ್ಪ ಸಂಖ್ಯಾತರಿಗೆ ತೋರುತ್ತಿರುವ ತಾರತಮ್ಯ ಕುರಿತದ್ದಾಗಿದ್ದರೆ ಉಳಿದವುಗಳು ಇಡೀ ಪಂಜಾಬ್ ಜನತೆಗೆ ಸಂಭಂಧಿಸಿವೆ. ಆದರೆ ಎಲ್ಲ ಬೇಡಿಕೆಗಳು ಕೇವಲ ಸಿಖ್‌ರಿಗೆ ಮಾತ್ರ ಸಂಭಂದಿಸಿದವುಗಳು ಎಂಬಂತೆ ಮಂಡಿಸಿದ್ದೀರಿ. ಇವುಗಳ ನಡುವೆ ಇರುವ ವ್ಯತ್ಯಾಸವನ್ನು ನೀವು ಗಮನಿಸಬೇಕು. ಮತ್ತು ಒಂದು ರಾಜಕೀಯ ಪಕ್ಷವಾಗಿ ಉಳಿದ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಪಂಜಾಬಿ ಜನತೆಯ ಬೇಡಿಕೆಗಳಿಗಾಗಿ ಹೋರಾಡಬೇಕು.

ಹಿಂದೂ ಜಾತೀಯತೆ

ಇಂದಿನ ಪರಿಸ್ಥಿತಿಗೆ ಕೇವಲ ಅಕಾಲಿ ದಳವನ್ನು ದೂಷಿಸುವಂತಿಲ್ಲ. ಜನಸಂಘದ ವಿಚಾರಗಳನ್ನಾಧರಿಸಿ ಹಿಂದೂ ಜಾತೀಯವಾದಿಗಳೂ ಸಾಕಷ್ಟು ಅನಾಹುತ ಮಾಡಿದ್ದಾರೆ. ಸ್ವಾತಂತ್ರ್ಯ ನಂತರವೂ ಜನಸಂಘಗಳು ಮತ್ತು ಹಿಂದೂ ಕಾಂಗ್ರೆಸ್ಸಿಗರು ಜನಗಣತಿಯ ಸಮಯದಲ್ಲಿ ಪಂಜಾಬಿಯಲ್ಲದೆ ಹಿಂದಿ ತಮ್ಮ ಭಾಷೆಯೆಂದು ಬರೆಸುವಂತೆ ಹಿಂದೂ ಜನತೆಯಲ್ಲಿ ವಿಷ ಬಿತ್ತಿದರು. ಪಂಜಾಬಿಗಳ ಐಕ್ಯತೆಗೆ ಇದೊಂದು ದೊಡ್ಡ ಪೆಟ್ಟಾಗಿದೆ.

ಕೇಂದ್ರದ ಮನೆಮುರುಕ ನೀತಿ

ಈ ದಿಶೆಯಲ್ಲಿ ಕೇಂದ್ರದ ವಿನಾಶಕಾರಿ ನೀತಿಯನ್ನು ಮರೆಯುವಂತಿಲ್ಲ. ಪಂಜಾಬಿ ಸೂಬದ ರಚನೆಗೆ ಕೇಂದ್ರ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿತು. ಆದರೆ ಇದು ಅನಿವಾರ್ಯವಾದಾಗ ಅನೇಕ ಪಂಜಾಬಿ ಪ್ರದೇಶಗಳನ್ನು ಪಂಜಾಬ್‌ನಿಂದ ಹೊರಗಿಡಲಾಯಿತು. ರಾಜ್ಯದ ಜನತೆಯನ್ನು ಮತೀಯವಾಗಿ ವಿಭಾಗಿಸಿ ಆ ಮೂಲಕ ದುರುಪಯೋಗ ಮಾಡಿಕೊಳ್ಳಲು ಇದೊಂದು ವ್ಯವಸ್ಥಿತ ಕ್ರಮವಾಗಿದೆ. ಕೇಂದ್ರದ ಈ ಕ್ರಮದಲ್ಲಿ ನೀವು ಕೈಜೋಡಿಸುತ್ತೀರಾ ?

ತಾವು ಅಧಿಕಾರದಲ್ಲಿ ಮುಂದುವರಿಯಲು ಆಳುವ ವರ್ಗಗಳು ವಿವಿಧ ಧರ್ಮೀಯರ ನಡುವಿನ ಭಿನ್ನಾಭಿಪ್ರಾಯಗಳನ್ನು ದುರುಪಯೋಗಪಡಿಸಿಕೊಳ್ಳುತ್ತವೆ. ಸಾಮ್ರಾಜ್ಯಶಾಹಿಗಳೂ ಇದರಲ್ಲಿ ಆಸಕ್ತರಾಗಿದ್ದಾರೆ. ಇವುಗಳ ವಿರುದ್ಧ ಪ್ರಗತಿಪರ ಶಕ್ತಿಗಳು ಹೋರಾಡುತ್ತಿವೆ. ಅಲ್ಪ ಸಂಖ್ಯಾತರು ತಮ್ಮ ಹಿತದೃಷ್ಟಿಯಿಂದಲೇ ಈ ಶಕ್ತಿಗಳೊಂದಿಗೆ ಸಹಕರಿಸಬೇಕು. 1947ರ ಮತೀಯ ದಂಗೆಗಳಲ್ಲಿ ಲಕ್ಷಾಂತರ ಮುಗ್ಧರ ಹತ್ಯಾಕಾಂಡವಾಯಿತು. ಇದರಿಂದ ಲಾಭ ಪಡೆದವರು ಯಾರು ? ಅಂತಹ ಅನಾಹುತದಿಂದ ಪಂಜಾಬನ್ನು ಪಾರುಮಾಡಬೇಕಾಗಿದೆ.

ತೀವ್ರಗಾಮಿಗಳಿಂದ ಬೇರೆಯಾಗಿ

ನಿಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ವಿರೋಧ ಪಕ್ಷಗಳಿಗೆ ಮನವಿ ಮಾಡಿಕೊಂಡಿದ್ದೀರಿ ಅಕಾಲಿ ಪಕ್ಷದಲ್ಲೇ ಎರಡು ಧೋರಣೆಗಳಿವೆ. ಮೊದಲನೆಯದು ಜಾತೀಯತೆಯಿಂದ ಕೂಡಿದ್ದು ತೀವ್ರಗಾಮಿಗಳೊಂದಿಗೆ ಸಹಕರಿಸಬೇಕೆಂದಿದ್ದರೆ, ಇನ್ನೊಂದು

(6ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ:

ದುರ್ವಾಸನೆಯಿಂದ ಮೂಗು ಮುಚ್ಚಿಕೊಂಡ ಸಮದ್‌ರು

— ಎನ್ಕೆ

ಬಳ್ಳಾರಿಯ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ಹೀನಾಯ ಪರಿಸ್ಥಿತಿಯನ್ನು ನೋಡಿ ಆರೋಗ್ಯ ಮಂತ್ರಿ ಅಬ್ದುಲ್ ಸಮದ್ ಅವರಿಗೆ ಬಹಳ ಆಶ್ಚರ್ಯವಾಯಿತಂತೆ. ಆಪರೇಶನ್ ಥಿಯೇಟರಿನ ದುರ್ವಾಸನೆಗೆ ಮೂಗು ಮುಚ್ಚಿಕೊಂಡು ಖೇದ ವ್ಯಕ್ತಮಾಡಿದರಂತೆ. ಹಪ್ಪಳದಂತೆ ಪ್ರತ್ಯೇಕತೆಯನ್ನು ತೋರ್ಪಡಿಸುವ ಮಹಡಿ, ತುಕ್ಕು ಹಿಡಿದ ಪಾತ್ರೆಗಳನ್ನು ನೋಡಿ "ಇದು ಇಂಜಿನಿಯರ್‌ರ ಬುದ್ಧಿವಂತಿಕೆಯ ಅಪಹಾಸ್ಯ"ವೆಂದು ಹೇಳಿದರಂತೆ. ಈ ಆಸ್ಪತ್ರೆಗೆ ರೂ. 87 ಲಕ್ಷ ಖರ್ಚಾಗಿದೆ. ಆಸ್ಪತ್ರೆ ಕಟ್ಟಿದ್ದಾರೆ, ಮಂತ್ರಿಗಳಿಂದ ಉದ್ಘಾಟನೆಯಾಗಿದೆ, ರೋಗಿಗಳಿದ್ದಾರೆ. ಆದರೆ ಕುಡಿಯಲು ನೀರಿಲ್ಲ. ಚರಂಡಿಯ, ಪಾಯಖಾನೆಗಳ ವ್ಯವಸ್ಥೆಯಿಲ್ಲ, ಎಕ್ಸ್‌ರೇ ಕೆಲಸ ಮಾಡುತ್ತಿಲ್ಲ. ಸ್ವಚ್ಛತೆ ಎಂಬ ಶಬ್ದವೇ ಕಾಣೆ. ಇವೆಲ್ಲ ಮಂತ್ರಿಗಳ ಕಣ್ಣಿಗೆ ಬಿದ್ದ ಚಿತ್ರಗಳು. ಇನ್ನು ರೋಗಿಗಳ ತಪಾಸಣೆ ಹೇಗೆ ನಡೆದಿದೆ ಔಷಧದ ಸರಬರಾಜು ಏನು, ಆಪರೇಶನಿನ ಗತಿಯೇನು, ಇದರ ಕುರಿತು ತಮ್ಮ ಎರಡನೇ ಸಂದರ್ಶನದಲ್ಲಿ ವರ್ಣನೀಯ ಮಾತುಗಳನ್ನು ಮಂತ್ರಿಗಳು ಆಡಬಹುದು.

ತಮ್ಮ 4 ವರ್ಷಗಳ ಅಧಿಕಾರಾವಧಿಯಲ್ಲಿ ನನಗನಿಸಿದ ಮಟ್ಟಿಗೆ ಅಬ್ದುಲ್ ಸಮದ್ ಅವರು ರಾಜ್ಯದಲ್ಲಿಯ ಯಾವದೊಂದು ಆಸ್ಪತ್ರೆಯನ್ನಾಗಲೀ ಸಂದರ್ಶಿಸಿದಂತೆ ಕಂಡು ಬರುವುದಿಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ಗತಿಯನ್ನೇ ರಾಜ್ಯದ ಎಲ್ಲ ಸರಕಾರಿ, ಖಾಸಗಿ ಆಸ್ಪತ್ರೆಗಳೂ ಎದುರಿಸುತ್ತಿವೆ. ತನ್ನ ಆಳ್ವಿಕೆಯಲ್ಲಿರುವ ಆಸ್ಪತ್ರೆಗಳೆಲ್ಲ ರೋಗ ನಿವಾರಣೆಯ ದೇಗುಲಗಳಲ್ಲ ಹೊಸ ರೋಗಗಳನ್ನು ತಂದೊಡ್ಡುವ ಕೊಂಪೆಗಳೆಂಬುದನ್ನು ಅಬ್ದುಲ್ ಸಮದ್ ಬಹಳ ಕಾಲದ ನಂತರ ತಿಳಿದುಕೊಂಡಂತೆ ಕಾಣುತ್ತದೆ. ಸರಕಾರಿ ಆಸ್ಪತ್ರೆಗಳಲ್ಲಿಯ ಎಕ್ಸ್‌ರೇ ಮೆಶಿನ್‌ಗಳು ರಿಪೇರಿಯಾಗದೆ ಬಿದ್ದಿವೆ. ಎಕ್ಸ್‌ರೇ ತಂತ್ರಜ್ಞರಿಲ್ಲ. ನುರಿತ ಡಾಕ್ಟರರಿಲ್ಲ, ಔಷಧಗಳಿಲ್ಲ, ಅಷ್ಟೇ ಅಲ್ಲ ಬ್ಯಾಂಡೇಜ್ ಬಟ್ಟೆಗಳೂ ಇಲ್ಲ. ಬಳ್ಳಾರಿ ಆಸ್ಪತ್ರೆಯಲ್ಲಿ ಹಾಳು ಬಿದ್ದ ಎಕ್ಸರೇ ಖಾತೆ ನೋಡುತ್ತಿರುವವರು ಯಾರು ಗೊತ್ತೇ ? ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ (ಸಿವಿಲ್). ಇವರು ಕಟ್ಟಿದ ಆಸ್ಪತ್ರೆ ಸೋರುತ್ತಿದೆಂದು ಮಂತ್ರಿವರ್ಯರೇ ಉದ್ಗಾರ ತೆಗೆದಿದ್ದಾರೆ. ಎಕ್ಸರೇ ಕಾಯುವ ಇಂಜಿನಿಯರ್ ಕಟ್ಟಡ ಕಟ್ಟಬಲ್ಲನೇ ? ಕಾಂಗ್ರೈ ಸರಕಾರದಲ್ಲಿ ಎಲ್ಲಾ ಸಾಧ್ಯ. ದಿನ ನಿತ್ಯದ ಘಟನೆಗಳೇ ಸಾಕ್ಷಿ.

ಬಿಜಾಪುರದ ಸರಕಾರಿ ಮತ್ತು ನಗರ ಸಭೆ ದವಾಖಾನೆಗಳಲ್ಲಿ ಕಳೆದ ಒಂದು ವರ್ಷದಿಂದ ಎಕ್ಸರೇ ಆಪರೇಟರರಿಲ್ಲ. ಸರ್ಜನರಾಗಲಿ, ದಂತ ವೈದ್ಯರಾಗಲೀ ಇಲ್ಲ. ಆರೋಗ್ಯ ಮಂತ್ರಿ ಸಮದ್ ಅವರು ತನ್ನ ಅಠಾಣ ಕಚೇರಿಯಿಂದ ಹೊರಬಿದ್ದು ರಾಜ್ಯದ ಆಸ್ಪತ್ರೆಗಳನ್ನು ಒಂದು ಸಲವಾದರೂ ಸಂದರ್ಶಿಸಿದರೆ ಆ ದಿವಸವಾದರೂ ರೋಗಿಗಳಿಗೆ ದುರ್ಗಂಧ ವಾಸನೆ ಕಡಿಮೆಯಾಗಬಹುದಲ್ಲಾ, ಒಳ್ಳೆ ಮದ್ದು, ಹಾಲು, ಬ್ರೆಡ್ ಸಿಗಬಹುದಲ್ಲ ಎಂಬ ಆಸೆ

ಕೆ. ಕೆ ಮೂರ್ತಿಯವರಿಗೆ ಮಂಗಳಾರತಿ

ಕೆ. ಕೆ. ಮೂರ್ತಿಯವರನ್ನು ಬೆಂಗಳೂರು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿದಾಗ, ಭ್ರಷ್ಟಾಚಾರದ ತವರುಮನೆಯಾದ ಬಿಡಿಎಯನ್ನು ಸ್ವಚ್ಛಗೊಳಿಸಲು ಮೂರ್ತಿಯಂಥವರಿಂದ ಸಾಧ್ಯವಿಲ್ಲೆಂಬ ಅಭಿಪ್ರಾಯವನ್ನು ನಾವು ವ್ಯಕ್ತಮಾಡಿದ್ದೆವು ತಾನು ಅಧಿಕಾರ ವಹಿಸಿಕೊಂಡ ನಾಲ್ಕೇ ದಿವಸದಲ್ಲಿ ಭ್ರಷ್ಟಾಚಾರದ ಕೇಸೊಂದನ್ನ ಪತ್ತೆ ಹಚ್ಚಿದಾಗ ಆಫೀಸಿನ ಇಡೀ ನೌಕರವರ್ಗ ಮೂರ್ತಿಯವರನ್ನು ಆಫೀಸಿನಲ್ಲೇ ಘೆರಾವೋ ಮಾಡಿ "ನೀವು ದೊಡ್ಡ ಮೀನು ನುಂಗುತ್ತಾ ಬಂದವರು, ನಾವು ಸಣ್ಣ ಮೀನು ನುಂಗುತ್ತೇವೆ. ನನ್ನ ವ್ಯವಹಾರದಲ್ಲಿ ಕೈ ಹಾಕಬಾರದು" ಎಂಬ ಎಚ್ಚರಿಕೆಯನ್ನಿತ್ತಾಗ ಮೂರ್ತಿಯವರು ಕಲ್ಲು ಮೂರ್ತಿಯಾಗಿಯೇ ಉಳಿಯಬೇಕಾಯಿತು. ಮೂರ್ತಿಯಂತೆ ದೊಡ್ಡ ಮೀನು ನುಂಗುವಂತ ವ್ಯಕ್ತಿಗಳೇ ಅಧಿಕಾರ ಸ್ಥಾನದಲ್ಲಿರಬೇಕೆಂಬ ಇಚ್ಛೆ ಮುಖ್ಯ ಮಂತ್ರಿ ಗುಂಡೂರಾಯರದ್ದಾಗಿದೆ. ಗುಂಡೂರಾಯ-ಮೂರ್ತಿಗಳೊಳಗೆ ವಿರಸ ಉಂಟಾಗಿದೆಯೆಂಬ ದಟ್ಟವಾರ್ತೆ. ಗುಂಡೂರಾಯರು ಮತ್ತೊಬ್ಬಾಕೆಯ ಮೇಲೆ ತಮ್ಮ ಕಟಾಕ್ಷ ಹರಿಸಿದ್ದಾರೆಂದೂ, ಗೃಹ ಪ್ರವೇಶದ ಘಳಿಗೆಯನ್ನು ಪಂಡಿತರು ನಿರ್ಧರಿಸಿದ್ದಾರೆಂದೂ ತಿಳಿದು ಬಂದಿದೆ. ಮೂರ್ತಿಯವರೇ ರಸಲೀಲೆಯಲ್ಲಿ ರಾಯರನ್ನ ಮುಳುಗಿಸಿದರೆ ಮಾತ್ರ ಎರಡನೇ ಸಂಬಂಧದ ಯೋಗ ತಪ್ಪಬಹುದಂತೆ. ಕೆಲವೇ ದಿವಸಗಳಲ್ಲಿ ಹೊಸ ಬೆಳವಣಿಗೆ ನೋಡಬಹುದು.

ಆದರೆ ಬೆಂಗಳೂರು ಅಭಿವೃದ್ಧಿ ಮಂಡಳಿಯ ವ್ಯವಹಾರ ಮಾತ್ರ ಕೊಳೆತು ಅಸಹ್ಯ ರೀತಿಯಲ್ಲಿ ನಾರುತ್ತಿದೆ. ಹರಿ ಬ್ರಹ್ಮಾದಿಗಳು ಬಂದರೂ ಈ ಕೊಳಚೆ ನಿವಾರಣೆಯಾಗಲಿಕ್ಕಿಲ್ಲ. ಇಂದಿರಾರ 20ಅಂಶ ಕಾರ್ಯಕ್ರಮದಲ್ಲಿ ಇದು ಸೇರಿಸಲ್ಪಟ್ಟಿಲ್ಲ. ಶಿವನೇ ಮತ್ತೊಮ್ಮೆ ತನ್ನ ಮೂರನೇ ಕಣ್ಣನ್ನು ತೆಗೆದರೆ ಮಾತ್ರ ಏನಾದರೂ ಸ್ವಲ್ಪ ಸುಧಾರಣೆಯಾಗಬಹುದಂತೆ. ಮಾರ್ಕ್ಸ್‌ವಾದಿಗಳಿಗೆ ಜನ ಶಕ್ತಿಯೇ ಶಿವಶಕ್ತಿ. ಸಂಘಟಿತ ಕಾರ್ಮಿಕ ವರ್ಗವನ್ನು ಬಿಡಿಎಯ ಭ್ರಷ್ಟಾಚಾರದ ವಿರುದ್ಧ ಉಪಯೋಗಿಸಬೇಕು. ಮನೆಯಿಲ್ಲದವರಿಗೆ ಮನೆ ಸಿಗಬೇಕಲ್ಲದೆ, ಈಗಾಗಲೇ ಆಸ್ತಿ ಹೊಂದಿದವರಿಗಲ್ಲ. ಸದ್ಯ ಬಿಡಿಎಯಿಂದ ಬಡವರಿಗೆ ಮಧ್ಯಮವರ್ಗದವರಿಗೆ ಸರಿಯಾದ ಉಪಯೋಗ ಸಿಗುತ್ತಿಲ್ಲ. ಲಂಚವಿಲ್ಲದೆ ಕೆಲಸವಿಲ್ಲ. ಮಂತ್ರಿಯವರ ಶಿಫಾರಸಿನಿಂದಲೇ ನನ್ನ ಗೆಳೆಯರೊಬ್ಬರ ಸಮಸ್ಯೆ ಪರಿಹಾರದ ಪ್ರಯತ್ನ ನಡೆಸಿದಾಗ ಬಿಡಿಎ ಕಚೇರಿಯ ನೌಕರದಾರನ ಉತ್ತರವೇನೆಂದರೆ "ಮಂತ್ರಿಗಳು ಶಿಫಾರಸು ಮಾಡಿದರೇನಾಯಿತು ಸ್ವಾಮಿ, ನಮ್ಮ ದುಡಿತಕ್ಕೆ ಪ್ರತಿಫಲವಿಲ್ಲದೆ ಕಾಗದ ಮುಂದೆ ಹೋಗುವುದಿಲ್ಲ. ಬೇಕಾದರೆ ಈ ಮಾತನ್ನು ನಿಮ್ಮ ಮಂತ್ರಿಯವರಿಗೂ ಹೇಳಬಹುದು." ಕಾಂಗ್ರೈ ಆಡಳಿತೆಯಲ್ಲಿ ನಿಜವಾಗಿಯೂ ಆಳುವವರಾರೆಂಬುದನ್ನೂ, ರಾಯರ ವೈಖರಿಯನ್ನೂ ನೀವೇ ನೋಡಿ ಮೂಗಿಗೆ ಬೆಟ್ಟಿಟ್ಟುಕೊಳ್ಳಬಹುದು. ಆದ್ದರಿಂದ ಉತ್ತರ ಕರ್ನಾಟಕದ ಒಂದು ಗಾದೆಯಂತೆ "ಸಮಗಾರ ದೇವರಿಗೆ ಮಚ್ಚು ಏಟು" ಎಂಬಂತೆ, ಜನತೆ ಒಗ್ಗಟ್ಟಾಗಿ ಮಚ್ಚು ಏಟು ಕೊಡಲು ಮುಂದಾಗದಿದ್ದರೆ. ಆಡಳಿತೆ ಸುಧಾರಿಸಲು ಸಾಧ್ಯವೇ ಎಂಬ ಗಡುತರವಾದ ಪ್ರಶ್ನೆ ನಿಮ್ಮ ಮುಂದಿದೆ. ಆ ಪ್ರಶ್ನೆ ಬಿಡಿಸಲು ನಾವು ಸಹಾಯ ಮಾಡುತ್ತೇವೆ. ನೀವೂ ಬನ್ನಿ.

ವಿರೋಧಿ ಪಕ್ಷಗಳ ಆಡಳಿತ ಬ್ಯಾಂಕ್ ಸಮಾರಂಭಕ್ಕೆ ಸಚಿವರ ಬಹಿಷ್ಕಾರ

ಚಿಕ್ಕಮಗಳೂರು ತಾಲ್ಲೂಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನ ಚಿನ್ನದ ಹಬ್ಬ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬರಲು ಒಪ್ಪಿಗೆ ನೀಡಿದ್ದ ರಾಜ್ಯದ ಸಹಕಾರಿ ಸಚಿವ ಶ್ರೀಕಂಠಯ್ಯನವರೂ ಅಭಿವೃದ್ಧಿ ಸಚಿವ ಬೇಗಾನೆ ರಾಮಯ್ಯನವರೂ ಸಮಾರಂಭಕ್ಕೆ "ಬಹಿಷ್ಕಾರ" ಹಾಕಿದ ಘಟನೆಯೊಂದು ವರದಿಯಾಗಿದೆ.

ಈ ಬ್ಯಾಂಕಿನ ಆಡಳಿತವು ವಿರೋಧಿ ಪಕ್ಷಗಳ ಹಿಡಿತದಲ್ಲಿರುವುದರಿಂದ ಸ್ಥಳೀಯ ಕಾಂಗ್ರೈಗಳು ಮಂತ್ರಿಗಳ ಪಾಲ್ಗೊಳ್ಳುವಿಕೆಗೆ ವಿರೋಧಿಸಿದರಂತೆ. ರಾಜಕೀಯವಾಗಿಯೂ, ನೈತಿಕವಾಗಿಯೂ ಈ ವಿರೋಧ, ಬಹಿಷ್ಕಾರ ಖಂಡನೀಯ. ಯಾವುದೇ ಪಕ್ಷದಿಂದ ಆರಿಸಿ ಹೋದರೂ ಕೂಡ ಸರಕಾರ ಆ ಪಕ್ಷದ ಜನರಿಗಷ್ಟೇ ಮೀಸಲಾಗಿಡದೆ, ಇಡೀ ರಾಜ್ಯದ ಎಲ್ಲ ಜನರಿಗಾಗಿ ಆಡಳಿತೆ ನಡೆಸುವ ಸಂಸ್ಥೆಯಾಗಿರುತ್ತದೆ ಕಾಂಗ್ರೆಸ್ ಮಂತ್ರಿಯಾಗಿದ್ದರೂ ಅವರು ಜನರ ಪ್ರತಿನಿಧಿಗಳೇ. ಮಂತ್ರಿಗಳಾಗಲಿ, ಲೋಕಸಭೆ, ವಿಧಾನ ಸಭೆ ಸದಸ್ಯರಾಗಲೀ ಚುನಾವಣಾ ಫಲಿತಾಂಶದ ಮರುದಿನವೇ ಪಕ್ಷದ ಪ್ರತಿನಿಧಿಯಾಗಿರುವಾಗಲೇ ತಮ್ಮ ಕ್ಷೇತ್ರದ ಎಲ್ಲಾ ನಾಗರೀಕರ ಪ್ರತಿನಿಧಿಯಾಗಿಯೇ ಮುಂದುವರಿಯಬೇಕಾಗುತ್ತದೆ. ಸಂಕುಚಿತ ಭಾವನೆಗೆ ಅಲ್ಲಿ ಅವಕಾಶವಿಲ್ಲ. ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲೂ ಇದು ಸಲ್ಲದು; ಆದರೆ ಇಂಥ ಘಟನೆಗಳು ಇತ್ತೀಚೆಗಷ್ಟೇ ಬೆಳಕು ಕಾಣುತ್ತಿವೆ.

ಪ. ಬಂಗಾಲದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದ ಎಡರಂಗ ಸರಕಾರ ಅಧಿಕಾರದಲ್ಲಿದ್ದಾಗ 1980ರಲ್ಲಿ ಕೇಂದ್ರದಲ್ಲಿ ಇಂದಿರಾ ಗಾಂಧಿ ಮತ್ತೆ ಅಧಿಕಾರಕ್ಕೆ ಬಂದ ನಂತರ ಜ್ಯೋತಿಬಸು ಸರಕಾರದ ಯೋಜನೆಗಳನ್ನು ವಿಫಲಗೊಳಿಸುವ ದುರುದ್ದೇಶದಿಂದ "ಕೂಲಿಗಾಗಿ ಕಾಳು" ನಾಗರೀಕರಿಗೆ ಅಗ್ಗದರದಲ್ಲಿ ಅತ್ಯಾವಶ್ಯಕ ವಸ್ತುಗಳ ಪೂರೈಕೆಗಳಿಗಾಗಿ ಕೇಂದ್ರದಿಂದ ಆಹಾರ ಧಾನ್ಯ ಒದಗಿಸುವುದನ್ನು ಬಂದ್ ಮಾಡಲಾಯಿತು. ವಿದ್ಯುಚ್ಛಕ್ತಿ ಅಭಾವವನ್ನು ಪೂರೈಸಲು ಥರ್ಮಲ್ ಪ್ಲಾಂಟ್‌ಗಳನ್ನೂ, ಹವಡಾದಲ್ಲಿ ಹಡಗುಕಟ್ಟುವ ಯೋಜನೆಯನ್ನೂ ಇದರಂತೆಯೇ 6ನೇ ಪಂಚವಾರ್ಷಿಕ ಯೋಜನೆಯ ಹಲವಾರು ಕಾರ್ಯಕ್ರಮಗಳಿಗೂ ಅಡೆತಡೆ ಉಂಟುಮಾಡಲಾಯಿತು. ಆದರೆ ಪ ಬಂಗಾಲದ ಜನತೆ ಮೊನ್ನೆ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಕೇಂದ್ರದ ಈ ಪಕ್ಷಪಾತ ನೀತಿಯನ್ನು ಖಂಡಿಸಿ ಮತ್ತೆ ಹೆಚ್ಚಿನ ಮತಗಳಿಂದ ಸಿ. ಪಿ. ಐ- (ಎಂ) ಮುಖಂಡತ್ವದ ಎಡರಂಗ ಸರ್ಕಾರವನ್ನು ಅಧಿಕಾರ ಗದ್ದುಗೆಗೇರಿಸಿದೆ.

ಗುಂಡೂರಾವ್ ಸರಕಾರದ ಮಂತ್ರಿಗಳು ಪಾಠಕಲಿತಂತೆ ಕಂಡುಬರುವುದಿಲ್ಲ. ಕರ್ನಾಟಕ ರಾಜ್ಯದ ಹಲವಾರು ಗ್ರಾಮ ಪಂಚಾಯಿತಿ, ನಗರ ಸಭೆ, ಭೂ ಅಭಿವೃದ್ಧಿ ಬ್ಯಾಂಕ್, ಸೊಸೈಟಿ ಮೊದಲಾದ ಸಂಸ್ಥೆಗಳು ವಿರೋಧಿ ಪಕ್ಷಗಳಿಂದ ನಡೆಸಲ್ಪಡುತ್ತಿವೆ. ಕೇಂದ್ರ ಸರಕಾರ ಪ. ಬಂಗಾಲ ಸರಕಾರಕ್ಕೆ ಮಾಡಿದಂತೆ ಇವುಗಳಿಗೆಲ್ಲ ನಮ್ಮ ಮಂತ್ರಿಗಳೇ ಅಸಡ್ಡೆ ಧೋರಣೆ ವ್ಯಕ್ತ ಮಾಡಿದರೆ, ಪ. ಬಂಗಾಲದ ಜನತೆ ತೋರಿಸಿಕೊಟ್ಟ ದಾರಿಯಲ್ಲೆ ಕರ್ನಾಟಕದ ಜನತೆ ಹೋಗಬಹುದೆಂಬ ದೂರದೃಷ್ಟಿ ಕಾಂಗ್ರೈಮಂತ್ರಿಗಳಿಗಿದ್ದಂತೆಕಂಡು ಬರುವುದಿಲ್ಲ. ಕಾರಣ ಮುಂದಿನ ವರ್ಷ ಮಾರ್ಚ್ ತಿಂಗಳಲ್ಲಿ ನಡೆಯಲಿರುವ ನಮ್ಮ ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಎಲ್ಲ ವಿರೋಧ ಪಕ್ಷಗಳು ಸೇರಿ ಕಾಂಗ್ರೈ ಮುಖಂಡರಿಗೆ ಸರಿಯಾದ ಬುದ್ಧಿ ಕಲಿಸುತ್ತಾರೆಂದು ಐಕ್ಯರಂಗ ಅಪೇಕ್ಷಿಸುತ್ತದೆ. ಚಿಕ್ಕಮಗಳೂರಿನ ಘಟನೆ ವಿರೋಧ ಪಕ್ಷದ ಮುಖಂಡರಲ್ಲೂ ಜನತೆಯಲ್ಲೂ ಜಾಗ್ರತಿಯನ್ನುಂಟುಮಾಡಲಿ. ಸಿ.ಪಿ.ಐ.(ಎಂ) ಈ ಮಹಾ ಕಾರ್ಯದಲ್ಲಿ ಸಹಾಯ ಮಾಡಲಿ.

●

ಸಿ. ಐ. ಟಿ. ಯು. ರಾಜಸ್ಥಾನ ಸಮಿತಿ ಪುನರ್‌ಸಂಘಟನೆ

ವಿಚ್ಛಿದ್ರಕಾರಿ ಚಟುವಟಿಕೆಗಳಲ್ಲಿ ನಿರತವಾಗಿದ್ದ ಸಿ ಐ ಟಿ.ಯು. ರಾಜಸ್ಥಾನ ರಾಜ್ಯ ಸಮಿತಿಯ ಕೆಲವರನ್ನು ಕಿತ್ತೊಗೆದು, ರಾಜ್ಯ ಸಮಿತಿಯನ್ನು ಪುನರ್ ಸಂಘಟನೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಸಭೆ ಸೇರಿದ್ದ ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ಕುರಿತು ಒಂದು ನಿರ್ಣಯಕ್ಕೆ ಬಂದಿದ್ದು, ರಾಜಸ್ಥಾನ ರಾಜ್ಯ ಸಮಿತಿಯ ಅಧ್ಯಕ್ಷ ಮೋಹನ್ ಪುನೀಮಿಯ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿತ್ತು.

ಮೋಹನ್ ಪುನೀಮಿಯಾ ಸಂಘಟನೆಯನ್ನು ಹಾಳುಗೆಡುವುದರಲ್ಲಿ ನಿರತವಾಗಿದ್ದು, ಇತ್ತೀಚೆಗೆ ಸಮಾನಾಂತರ ಸಂಘಟನೆ ಕಟ್ಟಲು ಯತ್ನಿಸುತ್ತಿದ್ದರು. ಕಾಂ| ಕೃಷ್ಣಕಾಂತನರ್ಮಾ ಅಧ್ಯಕ್ಷರಾಗಿರುವ, ಕಾಂ| ದುರ್ಗಾದಾಸ್ ಶಿರಾಲಿ ಪ್ರಧಾನ ಕಾರ್ಯದರ್ಶಿಯಾಗಿರುವ ಒಟ್ಟು 41 ಸದಸ್ಯರ ಹೊಸ ಸಮಿತಿಯೊಂದನ್ನು ಪುನರ್ ಸಂಘಟಿಸಲಾಗಿದೆ.

ಅಖಿಲ ಭಾರತ ಕಾರ್ಯದರ್ಶಿ ಮಂಡಳಿಯ ಪರವಾಗಿ ಕಾಂ| ಪಿ. ರಾಮಮೂರ್ತಿಯವರು ಈ ಕುರಿತು ಹೇಳಿಕೆಯೊಂದನ್ನು ಹೊರಡಿಸಿದ್ದಾರೆ. ರಾಜಸ್ಥಾನದಲ್ಲಿ ಸಿ.ಐ.ಟಿ.ಯು ಸದಸ್ಯರಲ್ಲಿ, ಕಾರ್ಯಕರ್ತರಲ್ಲಿ ಒಡಕುಂಟು ಮಾಡಲು ಕೆಲವರು ಪ್ರಯತ್ನಿಸಿದ್ದು, ಈ ಕುತಂತ್ರಗಳನ್ನು ವಿಫಲಗೊಳಿಸಿ, ಸಂಘಟನೆಯನ್ನು ಬಲಪಡಿಸುವಂತೆ ಕಾಂ| ಪಿ. ಆರ್. ಕರೆ ನೀಡಿದ್ದಾರೆ.

○

ರೈತ ಸಂಘದ ಚಟುವಟಿಕೆಗಳು

ಕೃಷಿ ಕಾರ್ಮಿಕರ ಜಾಥಾ

ತುಮಕೂರು ಕಸಬ ಊರುಕೆರೆ ಗ್ರಾಮದ ರೈತ ಕೃಷಿ ಕೂಲಿಗಾರರು ತಾರೀಖು 30-8-1982 ರಂದು ಕಾಲ್ನಡಿಗೆಯಲ್ಲಿ ಜಾಥಾ ಹೊರಟು ಬೆಳಗಿನ ಸುಮಾರು ಹನ್ನೊಂದು ಗಂಟೆಗೆ ತುಮಕೂರು ತಲುಪಿತು. ಗಣನೀಯ ಸಂಖ್ಯೆಯ ಮಹಿಳೆಯರನ್ನೊಳಗೊಂಡ ಪರಿಶಿಷ್ಟ ಜಾತಿಯವರೇ ಹೆಚ್ಚು ಸಂಖ್ಯೆಯಲ್ಲಿದ್ದ ಸಣ್ಣ ಹಿಡುವಳಿ ಕೃಷಿ ಕಾರ್ಮಿಕರನ್ನೊಳಗೊಂಡ ನೂರಾರು ಜನ ರೈತರು ಕೆಂಬಾವುಟಗಳನ್ನು ಹಿಡಿದು ವಾದ್ಯ ಸಹಿತ ನಗರದ ಪ್ರಮುಖ ಬೀದಿಗಳಲ್ಲಿ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿಯ ಬಳಿ ಘೋಷಣೆಗಳನ್ನು ಕೂಗುತ್ತಾ ದರಣಿ ನಡೆಸಿದರು.

ನಂತರ ರೈತ ಮುಖಂಡರ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ತುರ್ತಾಗಿ ಆಗಬೇಕಾದ ಮನವಿಯನ್ನು (ಮನವಿಯ ವಿವರ ಈಗಾಗಲೇ ಐಕ್ಯರಂಗದಲ್ಲಿ ಪ್ರಕಟವಾಗಿದೆ.) ಸಲ್ಲಿಸಿದರು. ನಿಯೋಗದಲ್ಲಿ ರೈತ ಸಂಘದ ಅಧ್ಯಕ್ಷರಾದ ಕಾಂ| ಹೆಚ್.ಸಿ. ಚನ್ನಪ್ಪ ಕೆ. ಆರ್. ನಾಯಕ್, ಟಿ. ಕೆ. ಗೋವಿಂದರಾಜು, ಶ್ರೀಯುತರುಗಳಾದ ಟಿ. ಹೆಚ್. ನರಸಿಂಹಯ್ಯ. ರುದ್ರಾರಾಧ್ಯ, ಪಂಡಿತ್‌ದಾಸಪ್ಪ, ಉಜ್ಜನಿದಾಸಪ್ಪ, ವಿ. ರಂಗಪ್ಪದಾಸ್, ಟಿ. ಸಿದ್ದಯ್ಯ, ಎಂ. ಗೋವಿಂದಯ್ಯ, ಎಂ. ರಾಜಣ್ಣ, ಪಟೇಲ್ ವೀರೇಗೌಡ, ಎಂ. ಆರ್. ರಾಜಲಕ್ಷ್ಮಮ್ಮ. ಜಿ. ಸೀಬಯ್ಯ, ಚಿಕ್ಕರಂಗಪ್ಪ, ಜಿ.ರಾಜಣ್ಣ ಕೆಂಪಮ್ಮ, ರಾಮಲಿಂಗಯ್ಯರವರುಗಳಿದ್ದರು.

ನಂತರ ನಡೆದ ಸಭೆಯಲ್ಲಿ ಕಾಂ| ಕೆ. ಆರ್. ನಾಯಕ್, ಹೆಚ್. ಸಿ ಚನ್ನಪ್ಪನವರು ಮಾತನಾಡಿ ವಿಧಾನ ಸೌಧ ಚಲೋ ಕಾರ್ಯಕ್ರಮ ಯಶಸ್ವಿ ಮಾಡಬೇಕೆಂದು, ರೈತ ಸಂಘದ ಸದಸ್ಯತ್ವವನ್ನು ಹೆಚ್ಚು ಸಂಖ್ಯೆಯಲ್ಲಿ ನೊಂದಾಯಿಸಬೇಕೆಂದೂ, ಸಂಘಟನೆಯನ್ನು ಬಲಪಡಿಸಬೇಕೆಂದು ತಿಳಿಸಿದರು.

ಚುಳಕಿ :

ದಿನಾಂಕ 23-8-82 ರಂದು ಸವದತ್ತಿ ತಾಲ್ಲೂಕಿನ ಚುಳಕಿ ಗ್ರಾಮದಲ್ಲಿ ರೈತರ ಮತ್ತು ರೈತ ಕೂಲಿಗಾರರ ಸಭೆಯನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ನಿತ್ಯಾನಂದ ಸ್ವಾಮಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಪಾಂಡಪ್ಪ ಬಾಲರೆಡ್ಡಿ ಹಾಗೂ ಶ್ರೀ ಶಂಕರಗೌಡ ಪಾಟೀಲ ಇವರ ಸಂಯುಕ್ತ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಸ್ವಾಮಿಜಿಯವರು ಮಾತನಾಡುತ್ತಾ ನಮ್ಮ ಸರಕಾರದ ಬಂಡವಾಳಶಾಹಿ ಪರ ಆರ್ಥಿಕ ನೀತಿಯಿಂದಾಗಿ ಕೃಷಿಯು ವಿನಾಶದ ಅಂಚಿಗೆ ನೂಕಲ್ಪಟ್ಟಿದ್ದು ಸರಕಾರದ ಈ ರೈತ ವಿರೋಧಿ ನೀತಿಯನ್ನು ಬದಲಾಯಿಸಲು, ರೈತರ ಫಸಲಿಗೆ ಲಾಭದಾಯಕ ಬೆಲೆ ಪಡೆಯಲು, ರೈತ ಕೂಲಿಕಾರರು ಜೀವನಾವಶ್ಯಕ ಕೂಲಿ ಪಡೆಯಲು ರೈತರು ಹಾಗೂ ಕೂಲಿಕಾರರು ಸಂಘಟಿತರಾಗಿ ಹೋರಾಡಬೇಕು ಎಂದು ಕರೆ ನೀಡಿದರು. ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಒಂದು ನೂರು ಸದಸ್ಯತ್ವವನ್ನು ಹೊಂದಿರುವ ಈ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತರು ಸರಕಾರಕ್ಕೆ ಅರ್ಪಿಸುವ ಅಂತಿಮ ಮಹಾ ಮನವಿಗೆ ಗ್ರಾಮದ ಎರಡು ಸಾವಿರ ರೈತರ ಸಹಿಗಳನ್ನು ಸಂಗ್ರಹಿಸುವ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಸುತಗಟ್ಟಿ :

ಬೆಳಗಾಂವ್ ಜಿಲ್ಲೆಯ ನೇಸರಗಿ ಹತ್ತಿರದ ಸುತಗಟ್ಟಿ ಗ್ರಾಮದಲ್ಲಿ 29-8-82 ರಂದು ಪ್ರಾಂತ ರೈತ ಸಂಘದ ಘಟಕ ಪ್ರಾರಂಭಿಸಲಾಯಿತು. ಈ ಕುರಿತು ನಡೆದ ಸಭೆಗೆ ಮುಖ್ಯ ಅತಿಥಿಗಳಾಗಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ವಿ. ಎನ್. ಹಳಕಟ್ಟಿ ಆಗಮಿಸಿದ್ದರು. ರೈತರನ್ನುದ್ದೇಶಿಸಿ ಬೆಳಗಾಂವ್ ಜಿಲ್ಲಾ ಸಮಿತಿಯ ಅಧ್ಯಕ್ಷ ಕಾಂ| ಎಸ್. ಎಚ್. ಕಪ್ಪಂಣವರ ಹಾಗೂ ಕಾರ್ಯದರ್ಶಿ ನಿತ್ಯಾನಂದಜೀಯವರು ಮಾತನಾಡಿ ರೈತರ, ಕೃಷೀ ಕೂಲಿಕಾರರ ಸಮಸ್ಯೆಗಳನ್ನು ವಿವರಿಸಿ ಸಂಘಟಿತ ಹೋರಾಟಕ್ಕೆ ಮುಂದಾಗಲು ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್. ಬಿ. ಗಾಳಿಕಟ್ಟಿ ವಹಿಸಿದ್ದರು. ಪ್ರಾಂತ ರೈತ ಸಂಘಕ್ಕೆ ಇನ್ನೂರು ಸದಸ್ಯರನ್ನು ಹೊಂದಿದ ಸುತಗಟ್ಟಿ ಗ್ರಾಮ ಘಟಕದ ಅಧ್ಯಕ್ಷರಾಗಿ ಶ್ರೀ ಬಸವಂತಪ್ಪ ಧೂಳಪ್ಪನವರು, ಬಸನಗೌಡ ನಿಂಗನಗೌಡಾ ಪಾಟೀಲಇವರು ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಮಲ್ಲಿಕಾರ್ಜುನ ತಂಬಾಕಿ ಇವರುಗಳು ಆಯ್ಕೆಯಾಗಿದ್ದಾರೆ.

ಭೈರನಹಟ್ಟಿ :

ಮೇಲ್ಕಂಡ ಸುತಗಟ್ಟಿ ಗ್ರಾಮದ ಪಕ್ಕದ ಭೈರನಹಟ್ಟಿಯಲ್ಲೂ ಕಿಸಾನ್ ಸಭಾ ಘಟಕ ಪ್ರಾರಂಭಿಸಲಾಗಿದೆ. ಆಗಸ್ಟ್ 29 ರಂದು ನಡೆದ ಸಭೆಯ ಅಧ್ಯಕ್ಷತೆಯನ್ನು ಬಸನಗೌಡಾ ಚಿನ್ನಗೌಡಾ ಪಾಟೀಲ ವಹಿಸಿದ್ದರು.

ಭೈರನಹಟ್ಟಿ ಗ್ರಾಮ ಘಟಕಕ್ಕೆ ಅಧ್ಯಕ್ಷರಾಗಿ ಶ್ರೀ ನೀಲಕಂಠಪ್ಪ ಶಿವಲಿಂಗಪ್ಪ ಭಂಗಿ, ಉಪಾಧ್ಯಕ್ಷರಾಗಿ ಜಿ. ಎಸ್. ಹಿರೇಮಠ, ಕಾರ್ಯದರ್ಶಿಯಾಗಿ ಶ್ರೀ ಬಿ ವಿ. ಮೋಡಗಿ ಇವರುಗಳು ಆಯ್ಕೆಯಾಗಿದ್ದಾರೆ.

ಈ ಎರಡೂ ಗ್ರಾಮ (ಸುತಗಟ್ಟಿ ಮತ್ತು ಭೈರನಹಟ್ಟಿ) ಗಳಿಂದ ರಾಜ್ಯದ ರೈತರು ಸರಕಾರಕ್ಕೆ ಅರ್ಪಿಸಲಿರುವ ಮನವಿಗೆ 2000 ಸಹಿ ಸಂಗ್ರಹ ಮಾಡಲು ನಿರ್ಣಯಿಸಲಾಗಿದೆ.

ಹರಪನಹಳ್ಳಿ :

ಹರಪನಹಳ್ಳಿ ತಾಲ್ಲೂಕಿನ ಶೃಂಗಾರ ತೋಟ ಗ್ರಾಮವಲ್ಲಿ 30-2-82 ರಂದು ರೈತ ಸಂಘದ ಘಟಕವನ್ನು ಪ್ರಾರಂಭಿಸಲಾಯಿತು. ಸಭೆಗೆ ಮುಖ್ಯ ಅತಿಥಿಗಳಾಗಿ ಬಳ್ಳಾರಿ ಜಿಲ್ಲಾ ಸಂಚಾಲಕ ಕಾಂ| ಸಿ. ಆರ್. ವೆಂಕಟೇಶ್ ಮತ್ತು ಕೊಮಾರಹಳ್ಳಿ ತಾಂಡದ ರೈತ ಸಂಘದ ಅಧ್ಯಕ್ಷ ಪೂರ್ವ್ಯಾ ನಾಯಕ್ ಇವರುಗಳು ಆಗಮಿಸಿದ್ದರು.

ಶೃಂಗಾರತೋಟ ಗ್ರಾಮ ಘಟಕದ ಅಧ್ಯಕ್ಷರಾಗಿ ಕೆ. ಕಾಸೀಮ್ ಸಾಹೇಬ್, ಉಪಾಧ್ಯಕ್ಷರಾಗಿ ಬೇವೂರು ಮಲ್ಲಪ್ಪ, ಕಾರ್ಯದರ್ಶಿಯಾಗಿ ಪಿ. ಮುರಾರಿ, ಸಹಕಾರ್ಯದರ್ಶಿಯಾಗಿ ಮೂಕಣರ ಮಾರಪ್ಪ ಇವರುಗಳು ಪದಾಧಿಕಾರಿಗಳಾಗಿ ಹಾಗೂ 16 ಜನರ ಸಮಿತಿಯೊಂದನ್ನು ಚುನಾಯಿಸಲಾಯಿತು. ಕಾಂ| ಬಿ. ಪರಶುರಾಮ ಇವರನ್ನು ಘಟಕದ ಸಂಚಾಲಕರನ್ನಾಗಿ ಆಯ್ಕೆ ಮಾಡಲಾಗಿದೆ.

ಉದನೂರು :

ಗುಲ್ಬರ್ಗಾ ತಾಲ್ಲೂಕಿನ ಉದನೂರು ಗ್ರಾಮದಲ್ಲಿ 30-8-82 ರಂದು ರೈತರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಯಶವಂತ ನವಲಗಿಯವರು ವಹಿಸಿದ್ದರು. ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ| ಕಲ್ಲಪ್ಪ ಕಿರಣಗಿ ಮತ್ತು ಕಾಂ| ಮಹಮ್ಮದ್ ಜಲಾಲ್ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕಾಂ| ಕಲ್ಲಪ್ಪ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ 'ವಿಧಾನ ಸೌಧ ಚಲೋ' ಕಾರ್ಯಕ್ರಮ ಹಾಗೂ ದಶಲಕ್ಷ ಸಹಿ ಸಂಗ್ರಹ ಕಾರ್ಯದ ಬಗ್ಗೆ ವಿವರಿಸಿದರು.

1-9-82 ರಂದು ಗುಲ್ಬರ್ಗಾ ತಾಲ್ಲೂಕಿನ ಕೋಟನೂರು ಮತ್ತು ಸೀತನ್ನೂರು ಗ್ರಾಮಗಳಿಗೆ ಕಾಂ|ಕಲ್ಲಪ್ಪ ಭೇಟಿ ನೀಡಿ ಸಹಿ ಸಂಗ್ರಹ ಕಾರ್ಯವನ್ನು ಚುರುಕುಗೊಳಿಸಲು ಮನವಿ ಮಾಡಿದ್ದಾರೆ.

ಮಂಗಳೂರು :

ಮಂಗಳೂರು ತಾಲ್ಲೂಕು ಪಚ್ಚನಾಡಿ ಗ್ರಾಮದ ರೈತರ ಸಭೆಯು 5-9-82 ರಂದು ನಡೆಯಿತು. ಅಧ್ಯಕ್ಷತೆಯನ್ನು ಆನಂತರಾಂ ಭಟ್ ಅವರು ವಹಿಸಿದ್ದರು.

ರೈತರನ್ನುದ್ದೇಶಿಸಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ| ಯು. ಜನಾರ್ಧನ್‌ನಾಯ್ಕ, ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ| ಕೆ- ಆರ್. ಶ್ರೀಯಾನ್ ಮಾತನಾಡಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಅವರು ಮುಂದುವರೆದು ಸರಕಾರದ ರೈತ ವಿರೋಧಿ ಧೋರಣೆಯನ್ನು ಎದುರಿಸಲು ಸಂಘಟಿತರಾಗಬೇಕೆಂದು ಮನವಿ ಮಾಡಿದರು.

ನಂತರ ರೈತ ಸಂಘ ಪಚ್ಚನಾಡಿ ಗ್ರಾಮ ಘಟಕಕ್ಕೆ ಈ ಕೆಳಕಂಡವರನ್ನು ಆಯ್ಕೆ ಮಾಡಲಾಯಿತು :

ಅಧ್ಯಕ್ಷರಾಗಿ ದೇವಪ್ಪ ಮೂಲನ, ಕಾರ್ಯದರ್ಶಿಯಾಗಿ ಸುರೇಂದ್ರ ಗುಜರನ್ ಇವರುಗಳನ್ನು ಆಯ್ಕೆ ಮಾಡಲಾಗಿದೆ. ಕೊನೆಯಲ್ಲಿ ಕಾಂ| ಪಿ. ನಾರಾಯಣರು ಧನ್ಯವಾದಗಳನ್ನರ್ಪಿಸಿದರು.

●

ಚಿಕ್ಕಮಗಳೂರು :

'ಜನತಾ ಮಾಧ್ಯಮ'ದ ಮೇಲೆ ನಡೆದ ಹಲ್ಲೆ ಖಂಡನೆ

ಹಾಸನ ಜಿಲ್ಲೆಯ ಜಿಲ್ಲಾ ಮಟ್ಟದ ದಿನಪತ್ರಿಕೆಯಾದ ಜನತಾ-ಮಾಧ್ಯಮದ ಮೇಲೆ ಇತ್ತೀಚೆಗೆ ನಡೆದ ಗೂಂಡಾ ದಾಳಿಯನ್ನು 29-8 82 ರಂದು ಚಿಕ್ಕಮಗಳೂರಿನಲ್ಲಿ ನಡೆದ ಕಾಫೀ ಕ್ಯೂರಿಂಗ್ ಮತ್ತು ಇತರ ಕಾರ್ಮಿಕ ಸಂಘದ ವಿಸ್ತೃತ ಸಭೆಯಲ್ಲಿ ತೀವ್ರವಾಗಿ ಖಂಡಿಸಲಾಯಿತು. ದಾಳಿ ನಡೆಸಿದ ಗೂಂಡಾಗಳ ಮೇಲೆ ತಕ್ಷಣ ಕ್ರಮ ಕೈಗೊಂಡು, ಪತ್ರಿಕೆಗೆ ಆದ ಆಸ್ತಿ-ಪಾಸ್ತಿ ನಷ್ಟಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಕಾಂ| ಸಿ. ನಂಜುಂಡಪ್ಪನವರು ವಹಿಸಿದ್ದರು. ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಕಾರ್ಮಿಕ ಮುಖಂಡರು ಮತ್ತು ಸ್ಥಳೀಯ ಕಾಫೀ ಕ್ಯೂರಿಂಗ್ ವರ್ಕ್ಸ್‌ನ ನೌಕರ ಶ್ರೀ ಕೆ. ಪಿ. ಮಾಧವ ಅವರ ಹಠಾತ್ ನಿಧನಕ್ಕೆ ಸಂತಾಪಸೂಚಿಸಲಾಯಿತು.

ಸಂಘದ ಕಾರ್ಯದರ್ಶಿ ಕಾಂ| ವಿಶ್ವನಾಥರವರು ಚಟುವಟಿಕೆಯ ವರದಿ ನೀಡಿದರು. ಸುಧೀರ್ಘ ಚರ್ಚೆಯ ನಂತರ ವರದಿಯನ್ನು ಅಂಗೀಕರಿಸಲಾಯಿತು.

ಮೈಲಿಮನೆ ಎಸ್ಟೇಟಿನ ಕಾರ್ಮಿಕ ಸೀನ ಎಂಬುವವರ ಮೇಲೆ ನಡೆದ ಪೋಲಿಸ್ ದೌರ್ಜನ್ಯವನ್ನು ಖಂಡಿಸಲಾಯಿತು. ಕಳೆದ ಎಂಟು ತಿಂಗಳಿಂದ ಮುಷ್ಕರ ನಿರತ ಎರಡುವರೆ ಲಕ್ಷ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತು. ಪತ್ರಿಕಾ ಸ್ವಾತಂತ್ರ್ಯಕ್ಕೆ ಅಪಾಯ ತಂದೊಡ್ಡಿರುವ ಬಿಹಾರದ "ಕರಾಳ" ಪತ್ರಿಕಾ ಮಸೂದೆಯನ್ನು ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಪಡಿಸಲಾಯಿತು.

ಕೋಲಾರ :

ಪರಿಹಾರ ಕಾರ್ಯಕ್ಕೆ ಒತ್ತಾಯ

ಕೋಲಾರ ಜಿಲ್ಲೆಯಾದ್ಯಂತ ಮಳೆ ಇಲ್ಲದೆ ರೈತರು, ವ್ಯವಸಾಯ ಕೂಲಿಗಾರರು ತೀವ್ರ ಸಂಕಷ್ಟದಲ್ಲಿದ್ದಾರೆ. ಸರಕಾರ ಈ ಗಂಭೀರ ಪರಿಸ್ಥಿತಿಯನ್ನು ಮನಗಂಡು ಶಾಶ್ವತ ಪರಿಹಾರ ಕಾರ್ಯವನ್ನು ತಕ್ಷಣಾ ಪ್ರಾರಂಭಿಸಬೇಕೆಂದು ಸಿ. ಪಿ. ಐ. (ಎಂ) ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಆಗಸ್ಟ್ 31ರಂದು ಕೋಲಾರದಲ್ಲಿ ಜಿಲ್ಲಾ ಸಮಿತಿಯ ಸಭೆ ನಡೆಯಿತು

ಕೋಲಾರ ಜಿಲ್ಲಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಉಪಾಧ್ಯಾಯರುಗಳ ನೇಮಕ ಮಾಡದಿರುವುದರಿಂದ ಮಕ್ಕಳಿಗೆ ತುಂಬ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತುರ್ತು ಗಮನ ನೀಡಬೇಕೆಂದು ಸಭೆ ಒತ್ತಾಯಿಸಿದೆ.

ಜಿಲ್ಲೆಯು ಕ್ಷಾಮದ ದವಡೆಗೆ ಸಿಕ್ಕಿ ಬಳಲುತ್ತಿದ್ದು ಸಾಲ ವಸೂಲಾತಿಯನ್ನು ಕೂಡಲೆ ನಿಲ್ಲಿಸಬೇಕೆಂದೂ ಸಭೆ ಒತ್ತಾಯಿಸಿದೆ.

●

ಮಂಗಳೂರು :

ನೇಕಾರರಿಗೆ ಮಜೂರಿ ಹೆಚ್ಚಳ

ದ. ಕ. ಜಿಲ್ಲಾ ವೀವರ್ಸ್ ಯೂನಿಯನ್‌ನ ಪ್ರತಿನಿಧಿಗಳಿಗೂ ಮತ್ತು ಮಂಗಳೂರು ಹ್ಯಾಂಡ್‌ಲೂಂ ಓನರ್ಸ್ ಅಸೋಸಿಯೇಶನ್‌ನ ಪ್ರತಿನಿಧಿಗಳಿಗೂ ಇತ್ತೀಚೆಗೆ ಮಾತುಕತೆ ನಡೆದು ನೇಕಾರರ ಕೂಲಿ ಹೆಚ್ಚಳದ ಬಗ್ಗೆ ಒಪ್ಪಂದವಾಗಿದೆ.

ಸಧ್ಯ ದೊರೆತಿರುವ ಮಜೂರಿಯಲ್ಲಿ ಶೇ. 20 ಮತ್ತು ನಲ್ಲಿ ಸುತ್ತುವವರಿಗೆ ಈಗ ಸಿಗುವ ಮಜೂರಿಯಲ್ಲಿ ಶೇ. 25 ರಷ್ಟು ಹೆಚ್ಚಳವಾದಂತಾಗಿದೆ. ಈ ಒಪ್ಪಂದದಿಂದ ಹೆಚ್ಚಳವಾದ ಮಜೂರಿಯು 16-8-82 ರಿಂದ ಜ್ಯಾರಿಯಾಗುತ್ತದೆ.

(4ನೇ ಪುಟದಿಂದ)

ಸಿಖ್ ಅಲ್ಪ ಸಂಖ್ಯಾತರ ನಿಜವಾದ ಸಮಸ್ಯೆಗಳಿಗಾಗಿ ಪ್ರಗತಿಪರ ಶಕ್ತಿಗಳ ಸಹಕಾರದೊಂದಿಗೆ ಹೋರಾಡಲು ಯೋಚಿಸಿದೆ. ಮೊದಲನೆಯ ಧೋರಣೆಯನ್ನು ನೀವು ತಿರಸ್ಕರಿಸಿದರೆ ನಿಮ್ಮೊಂದಿಗೆ ಸಹಕರಿಸಲು ನಾವು ಸಿದ್ದರಿದ್ದೇವೆ. ಇದಕ್ಕಾಗಿ ನೀವುಗಳು ತೀವ್ರಗಾಮಿಗಳ ಖಲೀಸ್ತಾನ ಮತ್ತು ಭಯೋತ್ಪಾಧಕ ಕ್ರಮಗಳಿಂದ ದೂರವಿರಬೇಕಾಗಿದೆ.

ಈ ಸಂಭಂದದಲ್ಲಿ ನೀವು ಸರಿಯಾದ ನಿಲುವು ತೆಗೆದುಕೊಂಡು ಪಂಜಾಬ್‌ನಲ್ಲಿ ಮತೀಯ ದ್ವೇಷ ಹರಡದಂತೆ ನೋಡಿಕೊಳ್ಳಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಗಮನಾರ್ಹ ಪಾತ್ರವಹಿಸಿರುವ ಅಕಾಲಿ ಚಳುವಳಿಯ ಭವ್ಯ ಪರಂಪರೆಗೆ ಇದು ಸಂಪೂರ್ಣ ವಿರೋಧವಾಗಿದೆ,

ಸೆಪ್ಟೆಂಬರ್ ೧ ರಂದು ರಾಜ್ಯದಾದ್ಯಂತ ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆ

ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ!

ಶಾಂತಿ ಬೇಕು; ಯುದ್ಧ ಬೇಡ.

ಡಬ್ಲ್ಯು ಎಫ್.ಟಿ.ಯು. ಕರೆಯ ಮೇರೆಗೆ ರಾಜ್ಯದಾದ್ಯಂತ ಸೆಪ್ಟೆಂಬರ್ 1 ರಂದು "ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆ"ಯು ಯಶಸ್ವಿಯಾಗಿ ನಡೆಯಿತು. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧ ಧಾಹದಿಂದಾಗಿ ಯುದ್ಧ ಭೀತಿ ಹೆಚ್ಚುತ್ತಿದ್ದು, ವಿಶ್ವ ಶಾಂತಿಗೇ ಗಂಡಾಂತರ ಪರಿಸ್ಥಿತಿ ಬಂದೊದಗಿದೆ. ಈ ಗಂಡಾಂತರಕಾರಿ ಪರಿಸ್ಥಿತಿಯನ್ನು ಜನತೆಗೆ ಮನದಟ್ಟು ಮಾಡಲು ಮೆರವಣಿಗೆ, ಬಹಿರಂಗ ಸಭೆಗಳ ಮೂಲಕ ಪ್ರಯತ್ನಿಸಲಾಯಿತು. ಅಲ್ಲಲ್ಲಿ ನಡೆದ ಸಭೆ-ಮೆರವಣಿಗೆಗಳ ವಿವರ ನಮಗೆ ತಲುಪಿದ್ದು, ವಿವರ ಇಂತಿದೆ :

ಮಂಗಳೂರು :

ಸೆಪ್ಟೆಂಬರ್ ಒಂದರಂದು ಯುದ್ಧ ವಿರೋಧಿ ಘೋಷಣೆಗಳನ್ನು ಕೂಗುತ್ತಾ ಭಾರೀ ಸಂಖ್ಯೆಯಲ್ಲಿ ಕಾರ್ಮಿಕರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಈ ಕಾರ್ಯಕ್ರಮವು ಸಿ.ಐ.ಟಿ.ಯು. ಮತ್ತು ಎ. ಐ. ಟಿ. ಯು.ಸಿ.ಗಳ ಜಂಟೀ ಆಶ್ರಯದಲ್ಲಿ ನಡೆಯಿತು.

ನೆಹರೂ ಮೈದಾನದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ. ಐ. ಟಿ.ಯು. ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾಂ। ಬಿ. ಮಾಧವ ಅವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ। ಪಿ. ರಾಮಚಂದ್ರರಾವ್ ಮತ್ತು ಕಾಂ। ಬಿ. ವಿ. ಕಕ್ಕಿಲ್ಲಾಯ ಅವರುಗಳು ಮಾತನಾಡಿ, ನ್ಯೂಟ್ರಾನ್ ಬಾಂಬ್ ದಾಳಿಯಿಂದ ಕೂಡಿದ ಅಣುಯುದ್ಧವನ್ನು ನಡೆಸಲು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಮಾಡುತ್ತಿರುವ ಹೇಯ ಪ್ರಯತ್ನಗಳನ್ನು ವಿವರಿಸಿದರು. ಯುದ್ಧ ಪ್ರಯತ್ನಗಳನ್ನು ಖಂಡಿಸಲು ಕಾರ್ಮಿಕ ವರ್ಗ ಮುಂದೆ ಬರಬೇಕೆಂದು ಭಾಷಣಕಾರರು ಮನವಿ ಮಾಡಿದರು.

ಕೊನೆಯಲ್ಲಿ ಕಾಂ। ಮೋನಪ್ಪ ಶೆಟ್ಟರು ವಂದನಾರ್ಪಣೆ ಮಾಡಿದರು.

ಕುಂದಾಪುರ:

ಸೆ. 1 ರಂದು ಕುಂದಾಪುರದಲ್ಲಿ ಸಿ. ಐ.ಟಿ.ಯು ಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಹಂಚಿನ ಮಜೂರ ಸಂಘದ ಕಾರ್ಯದರ್ಶಿ ಕಾಂ। ಸಿ. ನಾರಾಯಣ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ। ಶಿವಾನಂದ ಕೋಡಿ, ಕೆ.ಶಂಕರ್, ಅಬ್ರಹಾಂ ಕರ್ಕಡ್ ಇವರುಗಳು ಮಾತನಾಡಿ ಯುದ್ಧ ಪ್ರಯತ್ನಗಳ ವಿರುದ್ಧ ನಡೆಸುವ ಚಳುವಳಿಯ ಮಹತ್ವವನ್ನು ವಿವರಿಸಿದರು. ಶಾಂತಿ ಮತ್ತು ನಿಶಸ್ತ್ರೀಕರಣಕ್ಕಾಗಿ ಜಗತ್ತಿನ ಕಾರ್ಮಿಕ ವರ್ಗ ಮತ್ತು ಸೋವಿಯತ್ ಯೂನಿಯನ್ ಹಾಗೂ ಇತರೆ ಸಮಾಜವಾದಿ ರಾಷ್ಟ್ರಗಳು ನಡೆಸುವ ಹೋರಾಟವನ್ನು ಅಭಿನಂದಿಸಿದರು.

ಕೊನೆಯಲ್ಲಿ ಕಾಂ। ವಿ. ಮಹಾಬಲ ಅವರು ಧನ್ಯವಾದ ಅರ್ಪಿಸಿದರು.

ಉಡುಪಿ :

ಉಡುಪಿಯ ಕಾರ್ಮಿಕ ಸಂಘಗಳು (ಸಿ.ಐ.ಟಿ.ಯು. ಮತ್ತು ಎ. ಐ. ಟಿ. ಯು. ಸಿ. ಗೆ ಸೇರಿರುವ ಸಂಘಗಳು) ಜಂಟಿಯಾಗಿ ಸೆಪ್ಟೆಂಬರ್ 1 ರಂದು "ಶಾಂತಿ ಮತ್ತು ಸೌಹಾರ್ದತಾ ದಿನ" ಆಚರಿಸಿದರು.

ಆರಂಭದಲ್ಲಿ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ರಥ ಬೀದಿಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಕಾಂ। ಡೇವಿಡ್ ಕರ್ಕಡ್ ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ। ಪಿ. ವಿಶ್ವನಾಥರೈ, ಸಿಂಪ್ಸನ್‌ಸೋನ್ಸ ಅವರುಗಳು ಮಾತನಾಡಿ ಶಾಂತಿ ಚಳುವಳಿಯ ಮಹತ್ವವನ್ನು ವಿವರಿಸಿದರು. ವಿಶ್ವ ಶಾಂತಿಯನ್ನು ರಕ್ಷಿಸಲು ಜನತೆ ಅವಿರತ ಹೋರಾಟ ನಡೆಸಬೇಕೆಂದು ಮನವಿ ಮಾಡಿದರು.

ಸಭೆಯ ಆರಂಭದಲ್ಲಿ ಬಿ. ಮೋನಪ್ಪ ಸಾಲಿಯಾನ್ ಸ್ವಾಗತಿಸಿದರು. ಕೊನೆಯಲ್ಲಿ ಟಿ.ಎಸ್.ಕೋಟಿಯಾನ್ ವಂದಿಸಿದರು.

ಬಿಜಾಪುರ :

'ಶಾಂತಿ ಮತ್ತು ಸೌಹಾರ್ದತಾ ದಿನ'ದ ಅಂಗವಾಗಿ ಸೆಪ್ಟಂಬರ್ 1 ರಂದು ಬಿಜಾಪುರದಲ್ಲಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆದವು. ರೈತರು, ಕಾರ್ಮಿಕರು, ವಿದ್ಯಾರ್ಥಿಗಳಿಂದ ಕೂಡಿದ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಡಿ.ಸಿ ಆಫೀಸ್ ಆವರಣದಲ್ಲಿ ಸಮಾವೇಶಗೊಂಡಿತು.

ನಂತರ ನಡೆದ ಸಭೆಯ ಅಧ್ಯಕ್ಷತೆಯನ್ನು ಕಾಂ। ಭೀಮಶಿ ಕಲಾದಗಿ, ವಿ. ಎಸ್. ಸೊನ್ನದ, ಲಾಯದಗುಂದಿ. ಎಲ್. ವಿ. ಸೊನ್ನದ ಮುಂತಾದವರು ಮಾತನಾಡಿ ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಯತ್ನಗಳನ್ನು ಖಂಡಿಸಿದರು.

(8ನೇ ಪುಟ ನೋಡಿ)

ಗುಲ್ಬರ್ಗ

ವಿಚಾರಗೋಷ್ಠಿ

18-8-82 ರಂದು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು ಅಖಿಲ ಭಾರತ ಮಟ್ಟದಲ್ಲಿ "ದುಡಿಯುವ ಮಹಿಳೆಯರ ದಿನ" ವನ್ನು ಆಚರಿಸಿತು. ಈ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಗುಲ್ಬರ್ಗಾ ಘಟಕವು ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿತ್ತು ಮಹಿಳೆಯರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಾಯಿತು.

ಕನ್ನಡ ಸಾಹಿತ್ಯ ಸಂಘದಲ್ಲಿ ಏರ್ಪಡಿಸಿದ್ದ ವಿಚಾರಗೋಷ್ಠಿಯಲ್ಲಿ ಕೆ. ಷರೀಫಾ ರವರು ಮಾತನಾಡುತ್ತಾ, ದುಡಿಯುವ ಮಹಿಳಾ ದಿನವನ್ನು ಆಚರಿಸುತ್ತಿರುವ ಹಿನ್ನೆಲೆ ಹಾಗೂ ದುಡಿಯುವ ಮಹಿಳೆಯರ ಸ್ಥಿತಿಗತಿಗಳನ್ನು ವಿವರಿಸಿದರು.

ಸ್ತ್ರೀ ಸೇವಾ ನಿಕೇತನದ ಮೇಲ್ವಿಚಾರಕರಾದ ಶ್ರೀಮತಿ ಪ್ರಭಾವತಿಕಾರ್ನಿಂಗ್, ವೀರಮ್ಮ ಗಂಗಸಿರಿ ಮತ್ತು ಸ್ಥಳೀಯ ಮಹಿಳಾ ಕಾಲೇಜಿನ ಅರ್ಥಶಾಸ್ತ್ರದ ಪ್ರಾಧ್ಯಾಪಕಿ ಶ್ರೀ ಉಷಾಶರ್ಮರವರುಗಳು ಮಾತನಾಡುತ್ತಾ ಮಹಿಳೆಯರಿಗೆ ಹೆಚ್ಚು ಉದ್ಯೋಗವಕಾಶಗಳನ್ನು ಒದಗಿಸಲು ಒತ್ತಾಯಿಸಿದರು.

ಕೊನೆಯಲ್ಲಿ ಘಟಕ ಸಂಚಾಲಕಿ ಲಲಿತಾ ಮಹಾಂತಪೂರ ಅವರು ಜಿಲ್ಲಾಧಿಕಾರಿಗೆ ಸಲ್ಲಿಸಿದ ಮನವಿಪತ್ರದ ಬೇಡಿಕೆಗಳನ್ನು ತಿಳಿಸಿದರು.

ಮನವಿಯ ಮುಖ್ಯಾಂಶಗಳು

1. ಮಹಿಳೆಯರಿಗೆ ಸಂಬಂಧಪಟ್ಟ ಕಾನೂನುಗಳನ್ನು ಜಾರಿಮಾಡಲು ಮಹಿಳಾ ಆಯೋಗದ ನೇಮಕವಾಗಬೇಕು.

2. ಮಹಿಳೆಯರು ಉದ್ಯೋಗ ಕಳೆದುಕೊಳ್ಳುವಂತೆ ಮಾಡುವ ಯಾಂತ್ರೀಕರಣ ನಿಲುಗಡೆಯಾಗಬೇಕು.

3. ದುಡಿಯುವ ಮಹಿಳೆಯರಿಗೆ ಸರಕಾರದಿಂದ ಹಾಸ್ಟೆಲ್ ಸೌಲಭ್ಯ ಒದಗಿಸಬೇಕು.

4. ಸಮಾನ ಕೆಲಸಕ್ಕೆ ಸಮಾನ ವೇತನ ಕಾನೂನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು.... ಇತ್ಯಾದಿ.

ಕೊನೆಯಲ್ಲಿ ಗಂಗಾಧರಸ್ವಾಮಿಯವರ ನಿರ್ದೇಶನದ "ಮಾತು-ಕೃತಿ" ಮತ್ತು "ಹೆಣ್ಣು" ಎಂಬೆರಡು ಬೀದಿ ನಾಟಕಗಳನ್ನು ಪ್ರದರ್ಶಿಸಲಾಯಿತು.

ಐಕ್ಯರಂಗ

ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ಪರಿಸರ

● ಜಗನ್ನಾಥ ಮಿಶ್ರಾ ಅವರನ್ನು ಕುಪ್ರಸಿದ್ಧ ರೋಂ ಚಕ್ರವರ್ತಿ ನೀರೋಗೆ ಹೋಲಿಸಿದರೆ ಅದು ಆತನಿಗೆ (ನೀರೋ) ಅಪಚಾರವೆಸಗಿದಂತಾಗುತ್ತದೆ ಏಕೆಂದರೆ ರೋಂ ಉರಿಯುತ್ತಿದ್ದಾಗ ನೀರೋ ಪಿಟೀಲು ಮಾತ್ರ ಬಾರಿಸುತ್ತಿದ್ದ ; ಆದರೆ ಬಿಹಾರದ ಮುಖ್ಯಮಂತ್ರಿ ಉರಿ ಹಬ್ಬಿಸುವುದಕ್ಕಾಗಿಯೇ ಚುರುಕಾಗಿ ಸಹಾಯ ಮಾಡುತ್ತಿದ್ದಾರೆ.

— ಸಿ ಎಸ್. ಚಿತ್ರರಂಜನ್ "ಮೈನ್‌ಸ್ಟ್ರೀಂ" ನಲ್ಲಿ

● ಕೇಂದ್ರಮಂತ್ರಿ ಮಂಡಲದ ಪುನರ್ರಚನೆ ಬಗ್ಗೆ ವರದಿಗಳು 'ಶಾಶ್ವತ ಜೋಕು' ಎಂದು ಆ. ೭8 ರಂದು ಶ್ರೀಮತಿ ಗಾಂಧಿಯವರು ಹೇಳಿದ್ದರು. 5 ದಿನಗಳ ನಂತರವಷ್ಟೆ ಅವರು ಸಂಪುಟ ಪುನರ್ರಚನೆ ಮಾಡಿದ್ದಾರೆ......ಈ ಜೋಕು ಯಾರ ಮೇಲೆ ಎಂದು ದೇಶವೇ ತಲೆ ಕೆರೆದುಕೊಳ್ಳುವಂತೆ ಮಾಡಿದ್ದಾರೆ. ಅಲ್ಲದೆ ಪುನರ್ರಚನೆಯ ಸ್ವರೂಪವೇ ಜೋಕಿನ ಮುಖ್ಯ ಅಂಶ.

— ದಿ ಟ್ರಿಬ್ಯೂನ್

● ಕೈಗಾರೀಕೃತ ದೇಶಗಳಲ್ಲೆಲ್ಲಾ ಸೇರಿಸಿ 1982 ಮಧ್ಯಭಾಗದಲ್ಲಿ ಹನ್ನೆರಡು ಜನಕ್ಕೊಬ್ಬ ನಿರುದ್ಯೋಗಿ ಇದ್ದಾನೆಂದೂ, ಈ ಪರಿಸ್ಥಿತಿ ಸದ್ಯಕ್ಕೆ ಬದಲಾಗುವ ಸೂಚನೆಇಲ್ಲವೆಂದು ಐ. ಎಂ. ಎಫ್ ವರದಿಯೊಂದು ತಿಳಿಸಿದೆ.

ಯು. ಎನ್. ಐ. ಆ. 22

● ಒಂದು ಕೋಟಿ ಭಾರತೀಯರಿಗೆ ಜೀವನದಲ್ಲಿ ತುಂಬಾ ಕತ್ತಲು. ಅವರು ಕುರುಡರು.ಜಗತ್ತಿನ ಕುರುಡರಲ್ಲಿ ಐವರಲ್ಲೊಬ್ಬ ಭಾರತದಲ್ಲಿದ್ದಾನೆ. 4.5 ಕೋಟಿ ಜನ ದೃಷ್ಟಿ ಮಾಂದ್ಯರು ಭಾರತದಲ್ಲಿದ್ದಾರೆ. ಪ್ರತಿ ವರ್ಷ ಮೂವತ್ತು ಸಾವಿರ ಭಾರತೀಯ ಮಕ್ಕಳು ವಿಟಮಿನ್ 'ಎ' ಅಭಾವದಿಂದ ಕುರುಡರಾಗುತ್ತಿದ್ದಾರೆ. — ಇ. ಎಸ್. ಎಸ್. ಸೆ. 5

● ಪಾಕಿಸ್ಥಾನದಲ್ಲಿ ಮತ್ತೆ ಲಷ್ಕರಿ ಶಾಸನ ಜಾರಿಗೆ ಬರುವುದನ್ನು ತಪ್ಪಿಸಬೇಕೆಂದು ನಾನು ಬಯಸುತ್ತೇನೆ.

— ಜಿಯಾ ಉಲ್ ಹಕ್ (ಪಾಕಿಸ್ಥಾನದ ಅಧ್ಯಕ್ಷರು)

○ ಉತ್ತರ ಪ್ರದೇಶದ ಬಸ್ತಿ ಕ್ಷೇತ್ರದ ಕಾಂಗ್ರೆಸ್ (ಐ) ಸಂಸತ್ ಸದಸ್ಯ ಕಲ್ಪನಾಥ್ ಸೋನಕರ್ ಅವರ ಹತ್ಯೆಗೆ ಇಂದು ದೆಹಲಿ ರೈಲ್ವೆ ನಿಲ್ದಾಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದರು. ಸೋನಕರ್ ಕಾಂಗ್ರೆಸ್ಸನ್ನು ತ್ಯಜಿಸಿ ಸಂಜಯಗಾಂಧಿ ವಿಚಾರ ಮಂಚವನ್ನು ಈಚೆಗೆ ಸೇರಿದ್ದರು. "ಇಂದಿರಾ ಗಾಂಧಿ ಜಿಂದಾಬಾದ್ ಎಂದು ಕೂಗುತ್ತಿದ್ದ ನೂರೈವತ್ತಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಗೂಂಡಾಗಳು ತಮ್ಮನ್ನು ಬೀದಿ ದೀಪದ ಕಂಬವೊಂದರತ್ತ ತಳ್ಳಿ ಕತ್ತು ಹಿಸುಕಿ ಕೊಲ್ಲಲು ಯತ್ನಿಸಿದರೆಂದು ಸೋನಕರ್ ಪತ್ರಿಕಾಗೋಷ್ಠಿಯಲ್ಲಿ ಆಪಾದಿಸಿದರು.

— ಪಿ. ಟಿ ಐ, ಯು. ಎನ್. ಐ. ಆ. 28

○ ಭಾರತೀಯ ಕೈಗಾರಿಕೋದ್ಯಮಿಗಳ "ಹಿಂಜರಿತ"ದ ಕೂಗು ಅವರ ಪ್ರಸಕ್ತ ಪರಿಸ್ಥಿತಿಯ ಸೂಚಕವಲ್ಲ ; ಹಾಗೆನೇ ಖಾಸಗೀ ಕ್ಷೇತ್ರದ ಒಂದು ವಿಭಾಗ ಅವುದನ್ನು ಸಡಿಲಗೊಳಿಸುವ ನೀತಿಗೆ ವಿರೋಧ ವ್ಯಕ್ತ ಪಡಿಸುವುದು ಅದರ ಹೃದಯಾಳದಿಂದ ಬಂದದ್ದಲ್ಲ. ಆದರೆ ಈ ಎರಡರಲ್ಲೂ ಸತ್ಯದ ಸ್ವಲ್ಪ ಅಂಶವಿದೆ. ಭಾರತದ ಆರ್ಥಿಕತೆಯ ಸಂಧಿಗ್ಧ ಪರಿಸ್ಥಿತಿಯನ್ನಂತೂ ಇದು ಸೂಚಿಸುತ್ತದೆ.

— ರಂಜೀತ್ ಸಾವು, ಸಂಡೇಯಲ್ಲಿ

ಕೋಳಿಗುಂಟು ಮನೆ
ಪಂಜರವೇ ಅದರ ಮನೆ
ಹೊಲಕೆ ಉಂಟು ಮನೆ
ನೆಲದ ಬಿಲವೆ ಮನೆ
ಪ್ಯಾಲೆಸ್ಟೈನಿಗೆಲ್ಲಿ ಮನೆ ?
ನಾಡದೊಂದು ಇದ್ದರೂ ಇಲ್ಲ ಅವಗೆ ನೆಲೆ
ತಾಯಿ ನೆಲ ವೈರಿ ವಶ
ಕೋವಿ ಕತ್ತಿಯಿಂದಲೇ ಮನೆ ಯಶ, ಯಶ

— ಪ್ಯಾಲೆಸ್ಟೈನಿಯರ ಪಠ್ಯಪುಸ್ತಕದಲ್ಲಿನ ಒಂದು ಕವಿತೆ

ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆ

(7ನೇ ಪುಟದಿಂದ)

ಶಿವಮೊಗ್ಗ :

ಸೆಪ್ಟೆಂಬರ್ 1 ರಂದು ನಗರದ ಗೋಪಿ ಸರ್ಕಲ್‌ನಲ್ಲಿ ಡಿ.ವೈ.ಎಫ್.ಐ. ನೇತೃತ್ವದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ದುಷ್ಟ ಪ್ರಯತ್ನಗಳನ್ನು ಖಂಡಿಸಿ ಮೂಕ ಪ್ರದರ್ಶನ ನಡೆಸಲಾಯಿತು. ಈ ಮೂಕ ಪ್ರದರ್ಶನದಲ್ಲಿ ನೂರಾರು ಜನ ಪಾಲ್ಗೊಂಡಿದ್ದು ನಾಗರೀಕರ ಗಮನ ಸೆಳೆಯಿತು.

ಸವದತ್ತಿ :

ಸೆಪ್ಟೆಂಬರ್ 1 ರಂದು ಬೆಳಗಾಂವ್ ಜಿಲ್ಲೆಯ ಸವದತ್ತಿಯಲ್ಲಿ ಎಸ್.ಎಫ್.ಐ. ನೇತೃತ್ವದಲ್ಲಿ ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿ ಯುವಜನರು ಮೆರವಣಿಗೆ, ಸಭೆ ನಡೆಸಿದರು.

ಸ್ಥಳೀಯ ಕಾಲೇಜ್ ಆವರಣದಿಂದ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ತಹಸೀಲ್ದಾರರ ಕಚೇರಿಯ ಆವರಣದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಎಸ್. ಎಚ್. ಕಪ್ಪಣ್ಣವರ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ನಿತ್ಯಾನಂದ ಸ್ವಾಮೀಜಿ, ಸುಧೀಂದ್ರ ಕುಲಕರ್ಣಿ ಮತ್ತು ಬೆಳಗಾವಿಯ ದಿಲೀಪ್ ಕಾಮತ್ ಅವರುಗಳು ಮಾತನಾಡಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯನ್ನು ಖಂಡಿಸಿದರು. ಸಭೆಯ ಆವರಣದಲ್ಲಿ ಜಗತ್ತಿನ ವಿಭಿನ್ನ ಭಾಗಗಳಲ್ಲಿ ನಡೆಯುತ್ತಿರುವ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಪರಿಚಯಿಸುವ ಚಿತ್ರ ದರ್ಶನ ಏರ್ಪಡಿಸಲಾಗಿತ್ತು.

ತಿಪಟೂರು :

ಡಬ್ಲ್ಯು.ಎಫ್.ಟಿ.ಯು. ಕರೆಯ ಮೇರೆಗೆ ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆಯ ಅಂಗವಾಗಿ ಸಭೆ, ಮೆರವಣಿಗೆಗಳು ನಡೆದವು.

ಪುರಸಭಾ ಆವರಣದಿಂದ ಮುನಿಸಿಪಲ್ ಕೆಲಸಗಾರರು ಘೋಷಣೆಗಳನ್ನು ಕೂಗುತ್ತಾ, ಮೆರವಣಿಗೆ ಹೊರಡಿಸಿದರು. ಮೆರವಣಿಗೆಯ ನೇತೃತ್ವವನ್ನು ಕಾಂ| ಬಿ. ಡಿ. ರಾಮಯ್ಯ, ಕೋದಂಡರಾಮು, ಕೆ. ಮುನಿಯಪ್ಪ, ತೊಳಚನಾಯ್ಕ ಮತ್ತು ನಾಗರಾಜ್ ವಹಿಸಿದ್ದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ| ಬಿ.ಡಿ.ರಾಮಯ್ಯನವರು ಮಾತನಾಡುತ್ತಾ ಜಗತ್ತನ್ನು ಯುದ್ಧ ಭೀತಿಗೆ ತಳ್ಳಿದ ರೇಗನ್ ಸರಕಾರವನ್ನು ಖಂಡಿಸಿದರು.

ಕೊನೆಯಲ್ಲಿ ಕಾಂ| ಕೋದಂಡರಾಂ ವಂದಿಸಿದರು.

ಬೆಂಗಳೂರು :

ಡಬ್ಲ್ಯು. ಎಫ್. ಟಿ. ಯು ಕರೆಯ ಮೇರೆಗೆ ಬೆಂಗಳೂರಿನಲ್ಲಿ ಶಾಂತಿ, ಸೌಹಾರ್ದತಾ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಲಾಯಿತು.

ಸೆಪ್ಟಂಬರ್ 1 ರಂದು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಹೊರಟ ಮೆರವಣಿಗೆಯಲ್ಲಿ ಸಿ. ಐ. ಟಿ. ಯು.ಗೆ ಸೇರಿದ ನೂರಾರು ಕಾರ್ಮಿಕರು ಪಾಲ್ಗೊಂಡಿದ್ದರು.

ಯುದ್ಧ ಬೇಡ, ಶಾಂತಿ ಬೇಕು, ಸಾಮ್ರಾಜ್ಯಶಾಹಿ ಅಮೇರಿಕಾದ ಯುದ್ಧ ನೀತಿಗೆ ಧಿಕ್ಕಾರ ! ಎಂಬ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ರಾಜಭವನಕ್ಕೆ ತೆರಳಿತು.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಯತ್ನಗಳನ್ನು ಖಂಡಿಸಿ, ಕೇಂದ್ರ ಸರಕಾರಕ್ಕೆ ಸಲ್ಲಿಸಲು ರಾಜ್ಯಪಾಲರ ಗೈರುಹಾಜರಿಯಲ್ಲಿ ಅವರ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಯಿತು.

ರಾಜಭವನದ ಮುಂಭಾಗದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ಸಮಿತಿಯ ಅಧ್ಯಕ್ಷ ಕಾಂ|| ಸೂರ್ಯನಾರಾಯಣರಾವ್ ಮಾತನಾಡಿ ನ್ಯೂಟ್ರನ್ ಶಸ್ತ್ರಗಳಿಂದ ಮಾನವ ಕುಲಕ್ಕೆ ಬರುವ ಅಪಾಯವನ್ನು ವಿವರಿಸಿದರು. ಜಗತ್ತನ್ನು ಯುದ್ಧದ ಅಪಘಾತಕ್ಕೆ ತಳ್ಳಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಕಟುವಾಗಿ ಖಂಡಿಸಿದರು.

ಈ ಸಭೆ, ಮೆರವಣಿಗೆಯಲ್ಲಿ ವಿದ್ಯಾರ್ಥಿ ಯುವಜನರು ಪಾಲ್ಗೊಂಡಿದ್ದರು.

ರಾಯಚೂರು :

ಸೆಪ್ಟೆಂಬರ್ 1 ರಂದು ರಾಯಚೂರಿನಲ್ಲಿ ಸಿ ಐ. ಟಿ ಯು , ಎ. ಐ. ಟಿ. ಯು. ಸಿ., ಎಸ್. ಎಫ್. ಪಿ. ಟಿ. ಇ., ಎಸ್. ಎಫ್. ಐ., ಸಮುದಾಯ, ಬಂಡಾಯ, ಸಾಹಿತ್ಯ ಸಂಘಟನೆ, ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಜಂಟೀ ನೇತೃತ್ವದಲ್ಲಿ ಶಾಂತಿ, ಸೌಹಾರ್ದತಾ ದಿನಾಚರಣೆಯ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಆಗಸ್ಟ್ 27 ರಂದು ಎಲ್ಲಾ ಪುರೋಗಾಮಿ ಸಂಘಟನೆಗಳ ಪ್ರತಿನಿಧಿಗಳಿರುವ ಸಮಿತಿಯೊಂದನ್ನು ರಚಿಸಲಾಯಿತು.

ಸೆಪ್ಟೆಂಬರ್ 1ರಂದು ನಡೆದ ಸಭೆಯ ಅಧ್ಯಕ್ಷತೆಯನ್ನು ಶ್ರೀ ಅಮರೇಗೌಡ (ಅಡ್ವೋಕೇಟ್) ಅವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ| ಚಂದ್ರಶೇಖರ ಬಾಳೆ ಪುರುಷೋತ್ತಮ ಕಲಾಲಬಂಡಿ, ತಾಯಿನ್ಸ್, ಶ್ಯಾಮ ಲಾ ಪೂಜಾರ ಮತ್ತು ಕಾಂ| ರಾಮಕೃಷ್ಣ ಅವರುಗಳು ಮಾತನಾಡಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಕೋಟ್ಯಾಂತರ ಡಾಲರ್‌ಗಳನ್ನು ಖರ್ಚುಮಾಡಿ ಮಾರಕ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಿ ಮಾನವಕುಲಕ್ಕೆ ಗಂಡಾಂತರ ತಂದಿರುವುದನ್ನು ಕಟುವಾಗಿ ಖಂಡಿಸಿದರು.

ಕೊನೆಯಲ್ಲಿ ಎಸ್. ಎಫ್. ಐ. ನ ಕಾಂ| ಕೆ. ಬಸವರಾಜ್ ವಂದನಾರ್ಪಣೆ ಮಾಡಿದರು.

[ಈ ಮೇಲ್ಕಾಣಿಸಿದ ಸ್ಥಳಗಳಲ್ಲದೆ ಗುಲ್ಬರ್ಗಾ ಮತ್ತಿತರ ಕಡೆಗಳಲ್ಲೂ ಕಾರ್ಯಕ್ರಮ ನಡೆದಿರುವ ವರದಿಯಾಗಿದೆ.]

●

ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿರಿ

(1ನೇ ಪುಟದಿಂದ)

ಯೂನಿಯನಿಗಷ್ಟೇ ಪ್ರೋತ್ಸಾಹ ನೀಡುತ್ತಿರುವ ಕಾಂಗ್ರೆಸ್ ಸರಕಾರದ ನೀತಿಯನ್ನು ಖಂಡಿಸಲು ಕೇಂದ್ರ ಕಾರ್ಮಿಕ ಮಂತ್ರಿಯವರು ಕರೆದ ಸಭೆಯನ್ನು ಬಹಿಷ್ಕರಿಸಬೇಕೆಂದು ಕೇಂದ್ರ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮನ್ವಯ ಸಮಿತಿ ನಿರ್ಧರಿಸಿದ್ದು, ಸೆಪ್ಟೆಂಬರ್ 17 ರಂದು ದೇಶದಾದ್ಯಂತ ಧರಣಿ ಸತ್ಯಾಗ್ರಹ ನಡೆಸಬೇಕೆಂದು ಪ್ರತಿಯೊಂದು ಜಿಲ್ಲೆಯಲ್ಲೂ ಅದನ್ನು ಯಶಸ್ವಿಗೊಳಿಸಬೇಕೆಂದೂ ಕೇಳಿಕೊಳ್ಳುವ ನಿರ್ಣಯ ಪಾಸು ಮಾಡಲಾಯಿತು.

ಸಾಯಂಕಾಲ ಟೌನ್ ಹಾಲಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾಂ| ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ ಮತ್ತು ಎನ್.ಕೆ.ಉಪಾಧ್ಯಾಯರು ಭಾಷಣಮಾಡಿ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿವರಿಸಿ ಐಕ್ಯ ಹೋರಾಟ ನಡೆಸಬೇಕೆಂದು ಕರೆಯಿತ್ತರು. ಕಾಂ| ಎಂ. ಎಸ್. ಉಗ್ರಪ್ಪನವರು ಅಧ್ಯಕ್ಷತೆ ವಹಿದ್ದರು. ಕಾಂ| ಮೋಹನ ಕುಮಾರ್ ಅವರು ಸ್ವಾಗತ ಭಾಷಣ ಮಾಡಿದರು.

●

ಮಂಗಳೂರು :

ಸ್ವಾತಂತ್ರ್ಯ ದಿನಾಚರಣೆ

ಮಂಗಳೂರಿನ ದೇರೆಬೈಲ್ ಕೊಂಚಾಡಿ ಯುವಕ ಮಂಡಲದ ಆಶ್ರಯದಲ್ಲಿ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಅಧ್ಯಕ್ಷತೆಯನ್ನು ಕೆ. ಟಿ. ಭಂಡಾರಿ ವಹಿಸಿದ್ದರು.

ಆರಂಭದಲ್ಲಿ ಟಿ. ಮಾಧವರು ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಕೆ. ಜೌರಪ್ಪ, ಕೆ. ನಾಗಪ್ಪ ಸುವರ್ಣ, ಸತೀಶ್‌ಕುಮಾರ್, ಜನಾರ್ಧನ ದೇವಾಡಿಗ ಮತ್ತು ನರಸಿಂಹ ಕಾಮತ್ ಇವರುಗಳು ಮಾತನಾಡಿದರು.

●

ರಾಜ್ಯ ಸರಕಾರದ ಲೇವಿ ನೀತಿ !

ದ. ಕ. ಜಿಲ್ಲಾ ರೈತ ಸಂಘದ ಖಂಡನೆ

ಮಂಗಳೂರು : ತಾ. 7-9-1982 ದ. ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಂ| ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಜಿಲ್ಲಾ ಸಮಿತಿಯು ರಾಜ್ಯ ಸರಕಾರದ ಹೊಸ ಲೇವಿ ನೀತಿಯನ್ನು ತೀವ್ರವಾಗಿ ಖಂಡಿಸಿತು. 8 ಎಕ್ರೆವರೆಗಿನ ಎಲ್ಲಾ ರೈತರ ಲೇವಿ ವಿನಾಯಿತಿ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುವ ತೀರ್ಮಾನ ಕೈಗೊಂಡಿತು. ಅಲ್ಲದೆ ಡಿಸೆಂಬರ್ 20, 1982 ರಂದು ನಡೆಯಲಿರುವ ರಾಜ್ಯ ರೈತರ “ವಿಧಾನ ಸೌಧ ಚಲೊ” ಕಾರ್ಯಕ್ರಮಕ್ಕೆ ಒಂದು ಲಕ್ಷಕ್ಕೂ ಮಿಕ್ಕಿದ ರೈತರ ಸಹಿಸಂಗ್ರಹವನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಇತ್ತೀಚೆಗೆ ಉಡುಪಿ, ಕುಂದಾಪುರ ತಾಲ್ಲೂಕುಗಳಲ್ಲಿ ನೆರೆ ಪೀಡಿತರಾದ ಸಾವಿರಾರು ಕುಟುಂಬಗಳು ಮನೆ ಮಾರು ಕಳೆದುಕೊಂಡಿದ್ದು, ಸರಕಾರವು ಪರಿಹಾರ ಕಾರ್ಯದಲ್ಲಿ ಮೀನ ಮೇಷ ನಡೆಸುತ್ತಿರುವುದನ್ನು ಸಮಿತಿ ಖಂಡಿಸಿತಲ್ಲದೆ, ಎಲ್ಲಾ ಕುಟುಂಬಗಳಿಗೂ ತುರ್ತಾಗಿ ಪರಿಹಾರ ಮತ್ತು ನಿವೇಶನಗಳನ್ನೊದಗಿಸಬೇಕಲ್ಲದೆ, ಕೇವಲ 5 ಸೆನ್ಸ್ ಮಾತ್ರ ಮನೆ ನಿವೇಶನ ಒದಗಿಸಿದರೆ ರೈತರಿಗೆ ಸಾಕಾಗದು. ಹತ್ತು ಸೆನ್ಸಿಗೆ ಕಡಿಮೆಯಾಗದಷ್ಟು ನಿವೇಶನ ಸ್ಥಳ ಒದಗಿಸಬೇಕು. ಸರಕಾರೀ ಸಂಸ್ಥೆಗಳಿಗೆ ಚುನಾವಣೆ ನಡೆಸದೆ ಇರುವುದನ್ನು ಸಮಿತಿಯು ಖಂಡಿಸಿತಲ್ಲದೆ, ಕೂಡಲೇ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿತು.

ಕುಂದಾಪುರ ತಾಲ್ಲೂಕಿನ ನೆರೆಹಾವಳಿ ಪರಿಹಾರಕಾರ್ಯದಲ್ಲಿ ನೆರವಾದ ಎಲ್ಲಾ ರೈತ ಕಾರ್ಯಕರ್ತರಿಗೆ ಸಮಿತಿಯು ಅಭಿನಂದನೆ ಸಲ್ಲಿಸಿತಲ್ಲದೆ, ನೆರೆ ಪರಿಹಾರ ನಿಧಿಗೆ ಕುಂದಾಪುರ ತಾಲ್ಲೂಕು ರೈತ ಕಾರ್ಮಿಕರಿಂದ ಸಂಗ್ರಹಮಾಡಿದ ರೂ. 10,000 ವನ್ನು ನೀಡಿದ ನಿಧಿಗೆ ಧನ ಸಹಾಯ ನೀಡಿದವರೆಲ್ಲರಿಗೂ ಜಿಲ್ಲಾ ಸಮಿತಿ ಅಭಿನಂದನೆ ಸಲ್ಲಿಸಿತು.

ಮುಂದಿನ ವರ್ಷದ ಸದಸ್ಯತ್ವ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಚಳುವಳಿ ನಡೆಸಲು ಯೋಗ್ಯ ತೀರ್ಮಾನಗಳನ್ನು ಕೈಗೊಳ್ಳಲಾಯಿತಲ್ಲದೆ, ಅಕ್ಟೋಬರ್ 11ರಂದು ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಮನವಿ ನೀಡಲು ತೀರ್ಮಾನಿಸಲಾಯಿತು.

ಆರಂಭದಲ್ಲಿ ಕಾರ್ಯದರ್ಶಿ ಕಾಂ| ಯು. ಜನಾರ್ಧನನಾಯಕ್‌ರವರು ಸ್ವಾಗತಿಸಿದರು. ಕೊನೆಯಲ್ಲಿ ಕಾಂ| ಮೋನಪ್ಪಗೌಡರು ವಂದಿಸಿದರು.

○

ಜಾತೀಯ ಸೌಹಾರ್ದತೆ ಉಳಿಸಲು

ಸಿ. ಪಿ. ಐ. (ಎಂ) ಕರೆ

ಬೆಂಗಳೂರು ನಗರದ ವಿವೇಕನಗರದಲ್ಲಿ ಹಂಗಾಮಿ ಮಸೀದಿಯೊಂದನ್ನು ಕೆಡವಿಹಾಕಿರುವುದನ್ನೂ ಹಾಗೂ ಸಿಟಿ ಮಾರ್ಕೆಟ್ ಪ್ರದೇಶದಲ್ಲಿ ಗಣಪತಿ ವಿಗ್ರಹವನ್ನು ತೆಗೆದುಹಾಕಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಈ ದುಷ್ಕೃತ್ಯವನ್ನು ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಉಗ್ರವಾಗಿಖಂಡಿಸುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಈ ಕ್ರಮದಿಂದ ಸಿಟ್ಟಿಗೆದ್ದು ಪ್ರತಿಭಟಿಸಿದ ಆ ಪ್ರದೇಶದ ಮುಸ್ಲಿಂ ಜನತೆ ಹಾಗೂ ಇತರೆ ಜನ ವಿಭಾಗದ ಮೇಲೆ ಗೋಲಿಬಾರ್ ನಡೆಸಿ ಒಬ್ಬ ನಿರಪರಾಧಿಯ ಜೀವವನ್ನು ಬಲಿತೆಗೆದುಕೊಂಡು, ಹಲವಾರು ಮಂದಿಗೆ ತೀವ್ರ ಜಖಂಗೊಳಿಸಿರುವ ಪೋಲಿಸರ ಅತಿರೇಕವನ್ನು ಸಿ. ಪಿ. ಐ. (ಎಂ.) ಉಗ್ರವಾಗಿ ಖಂಡಿಸಿದೆ.

ಬೆಂಗಳೂರು ನಗರದ ಅಭಿವೃದ್ಧಿ ಪ್ರಾಧಿಕಾರದವರು ಹಿಂದು ಮುಂದಿನ ಯೋಚನೆಯಿಲ್ಲದೆ ಮಾತುಕತೆ ಮೂಲಕ ಮಸೀದಿ ಮತ್ತು ಗಣಪತಿ ವಿಗ್ರಹಕ್ಕೆ ಬೇರೊಂದು ಸ್ಥಳವನ್ನು ಒದಗಿಸಿಕೊಡುವ ವ್ಯವಸ್ಥೆಯನ್ನೂ ಮಾಡದೆ, ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ರೀತಿಯಲ್ಲಿ ಹಂಗಾಮಿ ಮಸೀದಿಯನ್ನೂ ಗಣಪತಿ ವಿಗ್ರಹವನ್ನು ಕೆಡವಿಹಾಕಿರುವುದು ಅತ್ಯಂತ ಆಶ್ಚರ್ಯಕರವಾಗಿದೆ. ಬಿ. ಡಿ. ಎ ಯ ಈ ದುಷ್ಕೃತ್ಯ ಮತ್ತು ಪೋಲಿಸ್ ಗೋಲಿಬಾರಿನ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರೊರ್ವರಿಂದ ನ್ಯಾಯಾಂಗ ತನಿಖೆಯನ್ನು ನಡೆಸಿ, ತಪ್ಪಿತಸ್ಥರನ್ನು ಬಯಲಿಗೆಳೆಯಬೇಕೆಂದು ಸಿ. ಪಿ. ಐ (ಎಂ) ಒತ್ತಾಯಿಸುತ್ತದೆ. ಪರಿಸ್ಥಿತಿಯ ದುರುಪಯೋಗವನ್ನು ಪಡೆದು ಜನತೆಯ ಒಗ್ಗಟ್ಟನ್ನು ಮುರಿಯಲು ಇದೇ ಸಂದರ್ಭದಲ್ಲಿ ಪ್ರಯತ್ನಿಸುವ ಕೋಮು ಶಕ್ತಿಗಳ ಕುತಂತ್ರಕ್ಕೆ ಬಲಿಯಾಗಬಾರದೆಂದು ಜನತೆಗೆ ಸಿ. ಪಿ. ಐ. (ಎಂ) ಮನವಿ ಮಾಡಿದೆ.

●

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.